ವಿಜಯಪುರ | ಸಂಪುಟ 02 | ಸಂಚಿಕೆ 218 | ಪುಟ 4 | ₹ 3.00

https://udayarashminews.com

udayarashmi 90088 88340

ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಮಂಗಳವಾರ, ಅಕ್ಟೋಬರ್ 22, 2024

"ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ಸೇವೆ ಮಾಡುತ್ತಾ ಸಮಾಜದ ಭದ್ರತೆ ಹಾಗೂ ಸುರಕ್ಷತೆಗಾಗಿ ಪ್ರಾಣ ಮುಡುಪಾಗಿಟ್ಟ ಪೊಲೀಸ್ ಅವರನ್ನು ಸ್ಮರಣೆ ಮಾಡುವುದು ನಮ್ಮ ಕರ್ತವ್ಯ. ಅವರಿಂದ ಪ್ರತಿಯೊಬ್ಬರು ಶಾಂತಿ ನೆಮ್ಮದಿಯಿಂದ ಜೀವನ ನಡೆಸಲು ಸಾಧ್ಯವಾಗಿದೆ."

■ ಟಿ.ಭೂಬಾಲನ್
ಜಿಲ್ಲಾಧಿಕಾರಿ, ವಿಜಯಪುರ

ವಕ್ಫ್ ಆಸ್ತಿ: ಹೊನವಾಡ ಗ್ರಾಮಸ್ಥರಿಂದ ಶಾಸಕ ಯತ್ನಾಳರಿಗೆ ಮನವಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಬಬಲೇಶ್ವರ ತಾಲ್ಲೂಕಿನ ಹೊನವಾಡ ಗ್ರಾಮದ 89ಕ್ಕೂ ಹೆಚ್ಚು ರೈತರ ಆಸ್ತಿಗಳನ್ನು ವಕ್ಫ್ ಆಸ್ತಿಗಳೆಂದು ಘೋಷಣೆ ಮಾಡುತ್ತಿರುವುದರಿಂದ ಆಗುತ್ತಿರುವ ಅನ್ಯಾಯಕ್ಕೆ, ನ್ಯಾಯ ಕಲ್ಪಿಸುವಂತೆ ಕೋರಿ ರೈತರು ತಮ್ಮ ದಾಖಲೆಗಳೊಂದಿಗೆ ನಗರ ಶಾಸಕರ ಸಾರ್ವಜನಿಕರ ಸಂಪರ್ಕ ಕಾರ್ಯಾಲಯಕ್ಕೆ ಶನಿವಾರ ಮನವಿ ಪತ್ರ ಸಲ್ಲಿಸಿದ್ದಾರೆ.

ಹೊನವಾಡ ಗ್ರಾಮದ ನಿವಾಸಿಗಳು ನಾಲ್ಕೈದು ತಲೆಮಾರುಗಳಿಂದ ಸಾಗುವಳಿ ಮಾಡುತ್ತ ಬಂದಿರುವ ಸರ್ವೇ ನಂಬರ್ 730, 763, 764, 765, 766/1, 769, 770, 771, 772, 773, 774, 776, 777, 789, 799, 800/2, 801, 802, 803, 804, 805, 806/1, 807, 809/1, 812/2, 813, 814, 760, 761, 762, 767, 768, 790, 762/2, 775/1, 806/2, 809/2, 812/1, 775/2, 775/3, 775/4, 775, 757/2ಎ, 757/2ಬಿ, 757/ಬಿ, 778, 779, 780, 781, 782, 783, 784, 785, 786, 787, 791, 792, 793, 794, 795, 796, 797, 798, 810, 825,839, 851, 10/1, 10/2, 28/1, 248/3, 265, 248/7, 248/2, 263/2, 264, 63/1, 248/1, 248/4, 248/6, 263/3, 87/1ಎ, 97/1ಬಿ, 97/1ಸಿ, 97/2ಎ, 97/2ಬಿ, 97/3, 830 ಸಂಬಂಧಿಸಿದಂತೆ ಸುಮಾರು 1151 ಎಕರೆ ಜಮೀನನ್ನು ವಕ್ಫ್ ಆಸ್ತಿ ಎಂದು ದಾಖಲು ಮಾಡುವ ಹುನ್ನಾರ ನಡೆಸಿರುವುದನ್ನು ಖಂಡಿಸಿದ್ದಾರೆ.

ಸದರಿ ಜಮೀನುಗಳ ಪಹಣಿ ಮತ್ತು ಇನಿತ್ತರ ದಾಖಲಾತಿಗಳಲ್ಲಿ ನಮ್ಮ ಹೆಸರು ದಾಖಲಿದೆ. ಹೀಗಿದ್ದರೂ ಸಹ ಜಿಲ್ಲಾ ವಕ್ಫ್ ಸಂಸ್ಥೆಯವರು ಹಾಗೂ ಅಧಿಕಾರಿಗಳು ಎಲ್ಲವೂ ವಕ್ಫ್ ಆಸ್ತಿಗಳಿದ್ದು, ಕಬ್ಜೆಯಿಂದ ಹೊರ ಹಾಕುತ್ತೇವೆ ಎಂದು ಬೆದರಿಸುತ್ತಿದ್ದಾರೆ. ಇದರ ಹಿಂದೆ ವಕ್ಫ್ ಸಚಿವ ಜಮೀರ್ ಅಹ್ಮದ್ ಅವರ ಕುಮ್ಮಕ್ಕು ಇರುತ್ತದೆ. ಈಚೆಗೆ ನಗರದಲ್ಲಿ ನಡೆದ ಅದಾಲತ್ ಸಭೆಯಲ್ಲಿ ವಕ್ಫ್ ಸಚಿವರ ಮೌಖಿಕ ಆದೇಶದಂತೆ ರೈತರಿಗೆ ಕಾನೂನು ಬಾಹಿರವಾಗಿ ನೋಟಿಸ್ ನೀಡಲಾಗುತ್ತಿದೆ. ಕೂಡಲೇ ತಾವು ಮಧ್ಯ ಪ್ರವೇಶಿಸಿ, ರೈತರಿಗೆ ನ್ಯಾಯ ಕಲ್ಪಿಸಿಕೊಡಬೇಕೆಂದು ಮನವಿಯಲ್ಲಿ ತಿಳಿಸಿದ್ದಾರೆ.

ವಿಜಯಪುರದಲ್ಲಿ ನಡೆದ ಪೊಲೀಸ್ ಹುತ್ಮಾತರ ದಿನಾಚರಣೆಯಲ್ಲಿ ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶ ಶಿವಾಜಿ ಅನಂತ ನಲವಡೆ ಅಭಿಮತ

ಬಲಿದಾನಗೈದ ಪೊಲೀಸರ ಶ್ರಮ ನೆನೆಯಬೇಕಿದೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಒತ್ತಡ ನಡುವೆಯೂ ಜನರ ಸುರಕ್ಷತೆಗೆಗಾಗಿ ಹಗಲಿರುಳೆನ್ನದೆ ಸೇವೆ ಸಲ್ಲಿಸುತ್ತಿರುವ ಪೊಲೀಸರ ಕರ್ತವ್ಯ ನಿಷ್ಠೆ ಶ್ಲಾಘನೀಯವಾಗಿದೆ ಎಂದು ಜಿಲ್ಲಾ ಪ್ರಧಾನ ಸತ್ರ ನ್ಯಾಯಾಧೀಶರಾದ ಶಿವಾಜಿ ಅನಂತ ನಲವಡೆ ಹೇಳಿದರು.

ಸೋಮವಾರ ನಗರದ ಜಿಲ್ಲಾ ಪೊಲೀಸ್ ವತಿಯಿಂದ ಪೊಲೀಸ್ ಕವಾಯತು ಮೈದಾನದಲ್ಲಿ ಆಯೋಜಿಸಿದ್ದ ಪೊಲೀಸ್ ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಹುತಾತ್ಮರಿಗೆ, ಪೊಲೀಸ್ ಸ್ಮಾರಕಕ್ಕೆ ಪುಷ್ಪಗುಚ್ಛವಿರಿಸಿ, ಗೌರವ ನಮನ ಸಲ್ಲಿಸಿ ಅವರು ಮಾತನಾಡಿದರು.

ಭಧ್ರತೆಯಲ್ಲಿ ಪ್ರಮುಖ ಪಾತ್ರವಹಿಸಿ ಸಮಾಜಘಾತುಕ ಚಟುವಟಿಕೆಗಳಿಗೆ ಕಡಿವಾಣ ಹಾಕುವ ಮೂಲಕ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸರ ಕರ್ತವ್ಯಬದ್ಧತೆಯಿಂದ ಬಲಿದಾನದಂತಹ ಘಟನೆಗಳು ಜರುಗುತ್ತಿವೆ. ಬಲಿದಾನಗೈದ ಪೊಲೀಸರ ಶ್ರಮ ನೆನೆಯಬೇಕಾಗಿದೆ ಎಂದು ಅವರು ಹೇಳಿದರು.

ಜಿಲ್ಲಾಧಿಕಾರಿ ಟಿ.ಭೂಲನ್ ಮಾತನಾಡಿ, ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ಸೇವೆ ಮಾಡುತ್ತಾ ಸಮಾಜದ ಭದ್ರತೆ ಹಾಗೂ ಸುರಕ್ಷತೆಗಾಗಿ ಪ್ರಾಣ ಮುಡುಪಾಗಿಟ್ಟ ಪೊಲೀಸ್ ಅವರನ್ನು ಸ್ಮರಣೆ ಮಾಡುವುದು ನಮ್ಮ ಕರ್ತವ್ಯವಾಗಿದೆ ಎಂದು ಹೇಳಿದರು.

ಪ್ರಭಾರಿ ಪೊಲೀಸ್ ವರಿಷ್ಠಾಧಿಕಾರಿ ಪ್ರಸನ್ನ ದೇಸಾಯಿ, ದೇಶಕ್ಕಾಗಿ ಹೋರಾಡುತ್ತಾ ವೀರ ಮರಣಹೊಂದಿದ್ದ ಪೊಲೀಸರ ಸ್ಮರಣೆಗಾಗಿ ಸ್ಮಾರಕವನ್ನು ಲಡಾಕ್‌ನ ಬಾಸಿ ಚೀನಾ ಭಾಗದಲ್ಲಿ ಸ್ಥಾಪಿಸಲಾಗಿದೆ.

ಕರ್ತವ್ಯದಲ್ಲಿದ್ದಾಗ ಹುತಾತ್ಮರರಾದ ಪೊಲೀಸರುಗಳನ್ನು ದೇಶದದ್ಯಂತ ಎಲ್ಲ ಘಟಕಗಳಲ್ಲಿ ಸ್ಮರಿಸಲಾಗುತ್ತಿದೆ ಎಂದು ಹೇಳಿದರು.

ಈ ವೇಳೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಶಂಕರ ಮಾರಿಹಾಳ, ರಾಮನಗೌಡ ಹಟ್ಟಿ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಅಧಿಕಾರಿಗಳು ಹಾಗೂ ಗಣ್ಯರುಗಳಿಂದ ಹುತಾತ್ಮರಿಗೆ ಪೊಲೀಸ್ ಸ್ಮಾರಕಕ್ಕೆ ಪುಷ್ಪಗುಚ್ಛವಿರಿಸಿ, ಗೌರವ ನಮನ ಸಲ್ಲಿಸಲಾಯಿತು.

" ಇಂದು ದೇಶದಾದ್ಯಂತ ಪೊಲೀಸ್ ಹುತಾತ್ಮರ ದಿನವನ್ನು ಅವರ ಗೌರವರ್ಥವಾಗಿ ಸ್ಮರಿಸಲಾಗುತ್ತಿದೆ. ದೇಶದ ಭದ್ರತೆ ಹಾಗೂ ನಮ್ಮ ರಕ್ಷಣೆ ಮಾಡುವ ಸಂದರ್ಭ ಹೋರಾಡಿ ತಮ್ಮ ಜೀವನ ತ್ಯಾಗ ಮಾಡಿದ ಪೊಲೀಸರಿಗೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಈ ದಿನ ಗೌರವ ನಮನ ಸಲ್ಲಿಸಲಾಗುತ್ತಿದೆ. 1959ರಲ್ಲಿ ಚೀನಿ ಪಡೆಗಳೊಂದಿಗೆ ನಡೆದ ಹೋರಾಟದಲ್ಲಿ ತಮ್ಮ ಜೀವನ ತ್ಯಾಗ ಮಾಡಿದ ಪೊಲೀಸ್‌ರನ್ನು ಸ್ಮರಿಸುವ ಈ ದಿನ ಹುತಾತ್ಮರ ದಿನವಾಗಿ ಆಚರಿಸಲಾಗುತ್ತಿದೆ. ಸೈನಿಕರು ಗಡಿಯಲ್ಲಿ ದೇಶ ರಕ್ಷಣೆ ಮಾಡುತ್ತಾರೆ. ಸಾರ್ವಜನಿಕರು ಜನರ ಆಸ್ತಿ-ಪಾಸ್ತಿ ರಕ್ಷಣೆಗಾಗಿ ದುಷ್ಟ ಶಕ್ತಿಗಳ ದಮನಕ್ಕಾಗಿ ತಮ್ಮ ಜೀವನ ತ್ಯಾಗ ಮಾಡಿರುವ ಹಾಗೂ ನೆಮ್ಮದಿಯಾಗಿ ಶಾಂತಿಯಿಂದ ಜೀವನ ನಡೆಸಲು ಅವರ ಕಾರ್ಯ ಅನನ್ಯವಾಗಿದೆ. ಪೊಲೀಸರ ಕರ್ತವ್ಯ ನಿಷ್ಠೆಯಿಂದ ಸಮಾಜದಲ್ಲಿ ಪ್ರತಿಯೊಬ್ಬರು ಶಾಂತಿ ನೆಮ್ಮದಿಯಿಂದ ಜೀವನ ನಡೆಸಲು ಸಾಧ್ಯವಾಗಿದೆ."

■ ಟಿ.ಭೂಬಾಲನ್
ಜಿಲ್ಲಾಧಿಕಾರಿ, ವಿಜಯಪು

ವಿವಿಧ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದ ಎಂಎಲ್ಸಿ ಸುನೀಲಗೌಡ ಪಾಟೀಲ ಅಭಿಮತ

ಎಂ.ಬಿ.ಪಾಟೀಲ ನೀರಾವರಿ ಯೋಜನೆಗಳಿಂದ ರೈತರ ಬದುಕಿಗೆ ಭದ್ರತೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಸಚಿವ ಎಂ.ಬಿ.ಪಾಟೀಲ ಅವರ ನೀರಾವರಿ ಯೋಜನೆಗಳು ಕೃಷಿ ಮತ್ತು ರೈತರ ಬದುಕಿಗೆ ಭದ್ರತೆ ನೀಡಿವೆ ಎಂದು ವಿಧಾನ ಪರಿಷತ್ ಶಾಸಕ ಸುನೀಲಗೌಡ ಪಾಟೀಲ ಹೇಳಿದ್ದಾರೆ.

ಸೋಮವಾರ ವಿಜಯಪುರ ಜಿಲ್ಲೆಯ ಬಬಲೇಶ್ವರ ಪಟ್ಟಣದಲ್ಲಿ ಕೆ.ಆರ್.ಐ.ಡಿ.ಎಲ್ ವತಿಯಿಂದ ರೂ. 32 ಲಕ್ಷ ವೆಚ್ಚದಲ್ಲಿ ಮತ್ತು ಹೊಕ್ಕುಂಡಿಯಲ್ಲಿ ರೂ. 25 ಲಕ್ಷ ವೆಚ್ಚದಲ್ಲಿ ಅಲ್ಪಸಂಖ್ಯಾತರ ಕಾಲನಿಗಳಲ್ಲಿ ಸಿಸಿ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಈ ಮುಂಚೆ ಈ ಭಾಗದಲ್ಲಿನ ಜನ ಕುಡಿಯುವ ನೀರು ಕೇಳುತ್ತಿದ್ದರು. ಆದ-ರೆ, ಈಗ ಸಕ್ಕರೆ ಕಾರ್ಖಾನೆ ಸ್ಥಾಪಿಸುವಂತೆ ಬೇಡಿಕೆ ಸಲ್ಲಿಸುತ್ತಿದ್ದಾರೆ. ಸಚಿವ ಎಂ.ಬಿ.ಪಾಟೀಲರು ಕೈಗೊಂಡ ನೀರಾವರಿ ಯೋಜನೆಗಳಿಂದಾಗಿ ಈ ಭಾಗದಲ್ಲಿ ರೈತರು ಉದ್ಯೋಗ ಅರಸಿ ಗುಳೆ ಹೋಗುವುದನ್ನು ಬಿಟ್ಟು ಈಗ ಕೃಷಿಯಲ್ಲಿ ಬದುಕು ಕಟ್ಟಿಕೊಂಡಿದ್ದಾರೆ. ತಮ್ಮ ಜಮೀನುಗಳಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಇದರಿಂದಾಗಿ ಕೃಷಿ ಮತ್ತು ಅನ್ನದಾತರ ಬದುಕಿಗೆ ಭದ್ರತೆ ಸಿಕ್ಕಂತಾಗಿದೆ ಎಂದು ಅವರು ಹೇಳಿದರು.

ಇದೇ ವೇಳೆ ಶಾಸಕರು ಬಡ ವಿದ್ಯಾರ್ಥಿಗಳಿಗೆ ನೋಟಬುಕ್ ವಿತ-ರಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ವಿ. ಎಸ್. ಪಾಟೀಲ, ಈರಗೊಂಡ ಬಿರಾದಾರ, ಬಿ. ಜಿ. ಬಿರಾದಾರ, ಡಾ. ಕೌಸರ್ ಅತ್ತಾರ, ಚನ್ನಪ್ಪ ಕೊಪ್ಪದ, ಮಲ್ಲು ಮರ್ಯಾಣಿ, ಜಿ. ಎಸ್. ಯರನಾಳ, ಅಕ್ಬರ್ ಗೋಕಾವಿ, ಹುದ್ದಾರ, ಜಂಗ್ಲಿಬಾಷಾ, ಮೈಬೂಬ ಮುಜಾವರ, ಹುಸೇನ ಅಪರಾಜ, ಗುರುರಾಜ ಜಂಗಮಶೆಟ್ಟಿ, ಸಿದರಾಯ ಆಡಿನ, ಪ. ಪಂ. ಮುಖ್ಯಾಧಿಕಾರಿ ಆರ್. ಎಸ್. ಸೋಲಾಪುರ, ವೈ. ಎನ್. ಪಾಟೀಲ, ನಾಗರಾಜ ಕುಲಕರ್ಣಿ, ರಫೀಕ ಸೋನಾರ, ಗುರುರಾಜ ಜೈನಾಪೂರ, ಪದ್ಮೊಗಿ ಒಡೆಯರ, ರಾಮಪ್ಪ ತೇಲಿ, ಪರಸಪ್ಪ ವಾಲಿಕಾರ, ಡಿ ಎಸ್. ಟಕ್ಕಳಕಿ, ಮಹೇಶ ಮಾಳಿ, ಮೈಬೂಬ ಮುಲ್ಲಾ, ಶಂಕರಗೌಡ ಹಲಗಣಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಪ್ರಶಾಂತ ಪೂಜಾರಿ, ಡಿ ಓ ಭಾರತಿ ಹಿರೇಮಠ, ಗ್ರಾಮಸ್ಥರು ಉಪಸ್ಥಿತರಿದ್ದರು.

ಗೋ ಸಂಪತ್ತು ದೇಶದ ಸಂಪತ್ತು :ಶಾಸಕ ಯತ್ನಾಳ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಗೋ ಸಂಪತ್ತು ದೇಶದ ಸಂಪತ್ತು. ಆದ್ದರಿಂದ ಪಶು ಇಲಾಖೆ ಸಿಬ್ಬಂದಿ ರೈತರ ಮನೆ ಬಾಗಿಲಿಗೆ ತೆರಳಿ ಪ್ರತಿ ಜಾನುವಾರಗಳಿಗೆ ಲಸಿಕೆ ಹಾಕಿ ಅವುಗಳನ್ನು ಕಾಪಾಡಬೇಕೆಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಕರೆ ನೀಡಿದರು.

ಅವರು ಸೋಮವಾರ ತಾಲೂಕಿನ ಕಗ್ಗೋಡ ಗ್ರಾಮದಲ್ಲಿರುವ ಗೋಶಾಲೆಯಲ್ಲಿ ಗೋಪೂಜೆ ಮಾಡುವ ಮೂಲಕ ಅ.21 ರಿಂದ ನ.21 ರವರೆಗೆ ರಾಷ್ಟ್ರೀಯ ಕಾರ್ಯಕ್ರಮವಾದ ಕಾಲು ಬಾಯಿ ರೋಗದ ವಿರುದ್ಧ ಲಸಿಕಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಈ ಸಂದರ್ಭದಲ್ಲಿ ಪಶುಪಾಲನೆ ಇಲಾಖೆ ಉಪ ನಿರ್ದೇಶಕ ಡಾ.ಅಶೋಕ ಘೋಣಸಗಿ ಉಪಸ್ಥಿತ-ರಿದ್ದರು.

ಮುಖ್ಯ ಪಶು ವೈದ್ಯಾಧಿಕಾರಿ ಡಾ. ಬಿ.ಎಸ್. ಕನಮಡಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ವೇಳೆ ಹಿರಿಯ ಪಶು ವೈದ್ಯಾಧಿಕಾರಿ ಡಾ.ಬಾಳಾಸಾಹೇಬ ಬಂಡಿ ಹಾಗೂ ಇಲಾಖೆ ಸಿಬ್ಬಂದಿ ಇದ್ದರು.

ರಾಷ್ಟ್ರೀಯ ಸ್ವಯಂ ಸೇವಕರ ಸಂಘದ ವಿಜಯದಶಮಿ ಉತ್ಸವದಲ್ಲಿ ಪ್ರಾಂತ ಸಂಪರ್ಕ ಪ್ರಮುಖ ಸುಧೀರಸಿಂಗ್ ಘೋರ್ಪಡೆ ಅಭಿಮತ

ರಾಷ್ಟ್ರೀಯತೆಯ ಚಿಂತನೆ ನಮ್ಮ ನರನಾಡಿಗಳಲ್ಲಿ ಪಸರಿಸಬೇಕಿದೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ:ರೋಲೆಕ್ಸ್,ಹುಬ್ಲಾಟ್ ಮೊದಲಾದ ವಿದೇಶಿಗರ ಬ್ರ್ಯಾಂಡ್ ಗಳನ್ನೇ ಪ್ರತಿಷ್ಠೆಯಾಗಿಸುವ ಮನೋಭಾವದಿಂದ ಹೊರಬಂದು ಸ್ವದೇಶಿ ಭಾವ ಜಾಗೃತವಾಗಬೇಕು ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಾಂತ ಸಂಪರ್ಕ ಪ್ರಮುಖ ಸುಧೀರಸಿಂಗ್ ಘೋರ್ಪಡೆ ಹೇಳಿದರು.

ವಿಜಯಪುರದ ದರಬಾರ ಹೈಸ್ಕೂಲ್ ಮೈದಾನದಲ್ಲಿ ರಾಷ್ಟ್ರೀಯ ಸ್ವಯಂ ಸೇವಕರ ಸಂಘದ ವತಿಯಿಂದ ನಡೆದ ವಿಜಯದಶಮಿ ಉತ್ಸವವನ್ನು ಉದ್ದೇಶಿಸಿ ಮಾತನಾಡಿದ ಅವರು, ಸಂಘ ನೂರು ವಸಂತಗಳನ್ನು ಪೂರೈಸುತ್ತಿರುವ ಸಂದರ್ಭದಲ್ಲಿ ಪಂಚ ಪರಿವರ್ತನೆ ಸೂತ್ರದೊಂದಿಗೆ ಬದಲಾವಣೆಗೆ ಸಂಕಲ್ಪ ಮಾಡಿದೆ ಎಂದರು.

ಸ್ವದೇಶಿ ಬಟ್ಟೆ ಒಂದೇ ದಿನದ ಆಚ-ರಣೆಯಾಗಬಾರದು, ಗೋ ಆಧಾರಿತ ಕೃಷಿ ಕೇಂದ್ರಿತ ಸ್ವದೇಶಿ ಚಿಂತನೆ, ವಿದೇಶಿ ವಸ್ತುಗಳ ವ್ಯಾಮೋಹದಿಂದ ದೂರವಾಗಬೇಕಿದೆ ಎಂದರು.

ಪರಿಸರದಲ್ಲಿ ಪರಿವರ್ತನೆ ಹಾಗೂ ಸಂರಕ್ಷಣೆ, ಸಾತ್ವಿಕ ಆಹಾರ ಪದ್ಧತಿ, ಕುಟುಂಬ ವ್ಯವಸ್ಥೆ ಹಾಗೂ ಶಿಕ್ಷಣ ವ್ಯವಸ್ಥೆಗೆ ಸನಾತನ ಸಂಸ್ಕೃತಿಯ ಸ್ಪರ್ಶ ಹೀಗೆ ಅನೇಕ ಪರಿವರ್ತನೆಯ ಸಂಕಲ್ಪವನ್ನು ಸಂಘ ಮಾಡಿದೆ ಎಂದರು.

ನಿವೃತ್ತ ಪೊಲೀಸ್ ಉಪ ಅಧೀಕ್ಷಕ ಶಂಕರ ಜೀರಗಾಳ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಆರ್.ಎಸ್. ಎಸ್. ವಿಜಯಪುರ ವಿಭಾಗ ಸಂಘ ಚಾಲಕ ಚಿದಂಬರ ಕರಮರಕರ ಉಪಸ್ಥಿತ-ರಿದ್ದರು.

ಸಮಾವೇಶಕ್ಕೂ ಮುನ್ನ ಗಣವೇಷಧಾ-ರಿಗಳಿಂದ ಆತ್ಮ ರಕ್ಷಣಾ ಕಲೆಯ ಪ್ರದರ್ಶನ, ವಿವಿಧ ಯೋಗಾಸನಗಳ ಪ್ರದರ್ಶನ ನಡೆಯಿತು. ಶಿಸ್ತು ಹಾಗೂ ಏಕತೆ ಪ್ರತಿಬಿಂಬಿಸುವ ಸಮತಾ ಪ್ರಯೋಗವನ್ನು ಗಣವೇಷಧಾರಿಗಳು ಪ್ರದರ್ಶಿಸಿದರು.

ಮುಸಲ್ಮಾನರು ಹಿಂದೂಗಳೇ

ಹಿಂದೂ ಎಂದರೆ ಜಾತಿ ಸೂಚಕವಲ್ಲ, ಇಲ್ಲಿನ ಗಾಳಿ, ಬೆಳಕು ಸ್ವೀಕರಿಸುತ್ತಿರುವ ಪ್ರತಿಯೊಬ್ಬರು ಹಿಂದೂಗಳು, ಈ ಚಿಂತನೆ ಸಮಾಜದಲ್ಲಿ ಬೇರೂರಬೇಕಿದೆ. ಮುಸಲ್ಮಾನರು ಸಹ ಹಿಂದೂಗಳೇ, ಘೋರಿ, ಆದಿಲ್ ಷಾಹಿ ಮೊದಲಾದವರಿಂದ ಹೆದರಿಯೋ, ಒತ್ತಾಯದಿಂದಲೋ ಅವರು ಮುಸಲ್ಮಾನರಾಗಿದ್ದಾರೆ ಎಂದರು.

ವಿದೇಶಿ ಮತಾಂಧ ಶಕ್ತಿಗಳ ಬಲ

ಕೆಲವೊಂದು ಸಮಾಜ ಘಾತುಕ ಶಕ್ತಿಗಳಿಗೆ ವಿದೇಶಿ ಮತಾಂಧ ಶಕ್ತಿಗಳು ಬಲ ತುಂಬುತ್ತಿವೆ, ಗಣಪತಿಯ ಮೆರವಣಿಗೆ ಅಲ್ಲಿ ಹಾದು ಹೋಗಬಾರದು ಎಂದರೆ ಇದೇನು ಪಾಕಿಸ್ತಾನವೇ? ಭಾರತ ಮಾತಾ ಕೀ ಜೈ ಎಂದು ಘೋಷಣೆ ಕೂಗಿದವರನ್ನು ಬಂಧಿಸಿದ ದೊಡ್ಡ ದುರ್ದೈವ ನಡೆದು ಹೋಯಿತು. ಲವ್ ಜಿಹಾದ್ ದೊಡ್ಡ ಸವಾಲು, ವಿದೇಶಿ ಶಕ್ತಿಗಳು ಇದಕ್ಕೆ ಕುಮ್ಮಕ್ಕು ನೀಡುತ್ತಿವೆ. ರಾಷ್ಟ್ರೀಯತೆಯ ಚಿಂತನೆ ನಮ್ಮ ನರ ನಾಡಿಗಳಲ್ಲಿ ಪಸರಿಸಬೇಕಿದೆ ಎಂದರು.

ವಿದೇಶದಲ್ಲೂ ಸಂಘ ಕ್ರೀಯಾಶೀಲ

ಡಾ.ಕೇಶವ ಹೆಗಡೆವಾರ ಅವರು ಅಂದು ಮನಸ್ಸು ಮಾಡಿದರೆ ವೈದ್ಯರಾಗಿ ದೊಡ್ಡ ಪ್ರಮಾಣದಲ್ಲಿ ದುಡ್ಡು ಗಳಿಸಬಹುದಿತ್ತು, ಆದರೆ ಮುಂದೆ ಯಾವತ್ತೂ ಭಾರತ ಪರಕೀಯರ ಆಳ್ವಿಕೆಗೆ ಒಳಪಡದೇ ಸ್ವಾಭಿಮಾನಿಯಾಗಬೇಕು, ಹಿಂದೂ ಸಮಾಜ ಜಾಗೃತವಾದರೆ ಮಾತ್ರ ಇದು ಸಾಧ್ಯ ಎಂದು ಅರಿತು ಮಹಾರಾಣಾ ಪ್ರತಾಪ್ ಸಿಂಹ್ ಅವರ ಜೀವನದಿಂದ ಸ್ಫೂರ್ತಿ ಪಡೆದು ಸಂಘವನ್ನು ರೂಪಿಸಿದರು. ಆಗಲೂ ಟೀಕೆಗೊಳಗಾದರೂ ಸಹ ಡಾ.ಹೆಗಡೆ ಅವರು ಕುಗ್ಗಲಿಲ್ಲ, ಪರಿಣಾಮವಾಗಿ ಕೋಟ್ಯಂತರ ಸ್ವಯಂಸೇವಕರು ಇಂದು ಸಂಘದಲ್ಲಿ ತೊಡಗಿ ಸಂಸ್ಕಾರ ಪಡೆಯುವಂತಾಗಿದೆ, 53 ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ಸಂಘ ಕ್ರೀಯಾಶೀಲವಾಗಿದೆ ಎಂದರು.

ಕ್ರೀಡಾ ಮನೋಭಾವನೆ ಮಕ್ಕಳಲ್ಲಿ ಬರಬೇಕು

ವಾಡಿ, : ಪಟ್ಟಣದ ರೈಲ್ವೆ ಕ್ರೀಡಾಂಗಣದಲ್ಲಿ ಪ್ರಿಯಾಂಕಾ ಖರ್ಗೆ ಕ್ರಿಕೆಟ್ ಉಚಿತ ಅಕಾಡೆಮಿಯ ಕೋಚ್ ಸಾಲೋಮಾನ್ ರಾಜಣ್ಣ

ಮಕ್ಕಳ ಕ್ರಿಕೆಟ್ ಅಭ್ಯಾಸದ ವೇಳೆ ಕ್ರೀಡಾ ಪಟುಗಳನ್ನು ಉದ್ದೇಶಿಸಿ ಮಾತನಾಡಿದ ರು.ಮಕ್ಕಳು ಭವಿಷ್ಯದಬುನಾದಿ ಕ್ರೀಡೆ ಯಾವುದೇ ಇರಲಿ ಮಕ್ಕಳು ಆಡುವ ಮನೋಭಾವನೆ ಛಲ ಇರಬೇಕು. ಗುರಿ ಇಟ್ಟುಕೊಂಡರೆ ' ಮಾತ್ರ ಕಲಿಯೋದು ಸಾಧ್ಯ ಗುರಿ ಇಲ್ಲದೇ ಯಾವುದೇ ಸಾಧ್ಯವಿಲ್ಲ ಕ್ರೀಡೆಯಲಿ ಶ್ರೀಮಂತ ಬಡವ ದೊಡ್ಡವರು ಸಣ್ಣವರು ಭಾವನೆ ಇರಬಾರದು ಯಾರು ಒಳ್ಳೆದು ಕಲಿತಾರೆ ಅವರು ಮುಂದೆ ಹೋಗುತ್ತಾರೆ ಇಚ್ಛೆ ಶಕ್ತಿ ಬೇಕು ನಮ್ಮ ದೇಶದ ಕ್ರೀಡಾ ಪಟುಗಳುವಿದೇಶದಲಿಹೆಸರುವಾಸಿಯಾಗಿದ್ದಾರೆ,ಸಚಿನ್ ತೆಂಡೂಲ್ಕರ್ ಅವರು ದೇಶದ ಇತಿಹಾಸ ಬರೆದಿದ್ದಾರೆ ಅವರಿಗೆ ವಿದೇಶದಲಿ ಅವರಿಗೆ ರಾಜ ಮರ್ಯಾದೆ ಇದೆ ಮನ್ನೆ ಒಲಂಪಿಕ್ಸ್ ನಲ್ಲಿ ಹಲವು ಸಾಧನೆ ಮಾಡಿದ ನಮ್ಮ ಭಾರತದ ಕ್ರೀಡಾಪಟು ಇತಿಹಾಸ ನಿರ್ಮಿಸಿದ್ದಾರೆ ಹಲವು ಪದಕ ತಂದಿದ್ದಾರೆ ಕ್ರೀಡಾ ಎಂಬುದು ಆಟಾವಂದೆ ಅಲ್ಲ ಇದು ಆರೋಗ್ಯಕ್ಕೆ ಒಳ್ಳೆದು ಆರೋಗ್ಯವಂತ ಜೀವನಕ್ಕೆ ಕ್ರೀಡೆ ವಾಯಾಮ್ ವಾಯುವಿಹಾರ್ ಬೆಳ್ಳಗಿನ ಜಾವ ಮಾಡಿದರೆ ಮನುಷ್ಯನಿಗೆ ಯಾವುದೇ ರೋಗ ಬರುವುದ್ದಿಲ್ಲ ಮಕ್ಕಳು ದೇಶದ ಭವಿಷ್ಯ ನಿಮ್ಮಂದು ದೇಶದ ಹೆಸರು ಬರುತ್ತೆ ಉಜ್ವಲ ಭವಿಷ್ಯದ ನಾಗರಿಕ ತಾವು ತಮ್ಮ ಸೇವೆಗೆ ದೇಶ ಕಾಯುತಿದೆ ತಾವು ದೇಶದ ಮುತ್ತು ರತ್ನಗಳು ನಿಮ್ಮ ಸೇವೆ ದೇಶಕ್ಕೆ ಅವಶ್ಯಕತೆ ಇದೆ ತಾವು ರಾಜ್ಯ ದೇಶಕಾಗಿ ಆಡಬೇಕು ಪಟ್ಟಣದಅಷ್ಟೇ ಅಲ್ಲ ದೇಶದ ಹೆಸರು ತರಬೇಕು ಎಂದು ಸಾಲೋಮಾನ್ ರಾಜಣ್ಣ ಹೇಳಿದರು ಮಹದೇವ್ ದೇವಕರ್ ಹಾಗು ನೂರಾರು ಶಿಬಿರಾರ್ಥಿಗಳು ಇದ್ದರು

ಜನಮನ ಸೆಳೆದ 'ಸಂಗೀತ ಸಂಭ್ರಮ' ಕಾರ್ಯಕ್ರಮ

ಕಲಬುರಗಿ: ಶಿವಯೋಗಿ ಪುಟ್ಟರಾಜ ಸಂಗೀತ ಸಂಸ್ಥೆ (ರಿ) ಮಂದೆವಾಲ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಹಯೋಗದಲ್ಲಿ ದಿ.19.10.2024 ರಂದು ನಗರದ ಮಾಣಿಕಪ್ರಭು ಕಾಲೋನಿಯ ಶ್ರೀ ಹನುಮಾನ ಮಂದಿರದಲ್ಲಿ ನಡೆದ ಸಂಗೀತ ಸಂಭ್ರಮ ಕಾರ್ಯಕ್ರಮ ಜನಮನ ಸೆಳೆಯಿತು.

ಶ್ರೀಮೃತ್ಯುಂಜಯ ದೇವರು. ಪೀಠಾ ಧಿಪತಿಗಳು ಶ್ರೀ ಜಗದ್ಗುರು ಶಿವಲಿಂಗೇಶ್ವರ ಜನ್ಮಸ್ಥಳ ಕೊಳ್ಳುರ ದಿವ್ಯಸಾನಿಧ್ಯ ವಹಿಸಿದ್ದರು. ಜೇವರ್ಗಿ ತಾಲ್ಲೂಕಿನ ಮಾಜಿ ಬಿಜೆಪಿ ಅಧ್ಯಕ್ಷರಾದ ಆರ್. ಭೀಮರಾವ್ ಗುಜಗೊಂಡರವರು ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ಜಿಲ್ಲಾ ಸಾಂಸ್ಕೃತಿಕ ಪ್ರಕೋಷ್ಠ ಸಂಚಾಲಕರು ಹಾಗೂ ಕಲಬುರಗಿ ಜಿಲ್ಲಾ ಗ್ರಾಮಾಂತರ ಬಿಜೆಪಿ ಯುವ ಮೋರ್ಚಾ ಕಾರ್ಯದರ್ಶಿಗಳಾದ ವಿಶ್ವನಾಥ ಎಸ್. ಸಾಹುಕಾರ ತಿಳಗುಳ ಕಾರ್ಯಕ್ರಮವನ್ನು ಉದ್ಘಾಟಿಸಿದರು ಭೀಮರಾವ ಹೂವಿನಹಳ್ಳಿ. ಹನಮಂತರಾವ ಬಿರಾದಾರ. ದತ್ತಪ್ಪ ಮದರಿ ಹಾಗೂ ಹನುಮಾನ ದೇವಸ್ಥಾನದ ಮುಖ್ಯ ಅರ್ಚಕರಾದ ಚಿದಾನಂದ ಸ್ವಾಮಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು ನಂತರ ನಡೆದ ಸಂಗೀತ ಸಂಭ್ರಮ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಾಡಿನ ಹೆಸರಾಂತ ಆಕಾಶವಾಣಿ ಹಾಗೂ ದೂರದರ್ಶನ ಕಲಾವಿದರು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಸಿದ್ದರಾಮ ಪೊಲೀಸ್ ಪಾಟೀಲ್ ಕುಕನೂರ. ಬಾಬುರಾವ ಕೋಬಾಳ.ಆಕಾಶವಾಣಿ ಕಲಾವಿದರಾದ ಬಸಯ್ಯ ಬಿ ಗುತ್ತೇದಾರ ತೆಲ್ಲೂರ. ದತ್ತರಾಜ್ ಕಲಶೇಟ್ಟಿ ಬಂದರವಾಡ. ಸಂಗೀತ ಶಿಕ್ಷಕರಾದ ಶ್ರೀ ಜಗದೀಶ ಶರಣರು ನಗನೂರ, ಸೂರ್ಯಕಾಂತ ಕೊಗನೂರ. ಶಾಸ್ತ್ರೀಗಳಾದ ಶ್ರೀ ನಾಗಲಿಂಗಯ್ಯ ಸ್ವಾವರಮಠ್ ಸುಂಟನೂರ.



ಈ ಎಲ್ಲಾ ಕಲಾವಿದರಿಂದ ಹಿಂದೂಸ್ತಾನಿ ಸಂಗೀತ. ಸುಗಮ ಸಂಗೀತ. ಜಾನಪದ ಗಾಯನ. ತತ್ವಪದ . ವಚನ ಗಾಯನ. ದಾಸವಾಣಿ. ಹಾಗೂ ಕಥಾಕೀರ್ತನ ಸೇರಿದಂತೆ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಖ್ಯಾತ ಆಕಾಶವಾಣಿ ಕಲಾವಿದರಾದ ಸಿದ್ದಣ್ಣ ಹೂಗಾರ. ದೇಸಾಯಿ ಕಲ್ಲೂರ. ಬಸವರಾಜ್ ಚಲಗೇರಿ. ಅನಿಲ್ ಮಠಪತಿ. ರೇವಣಸಿದ್ಧ ಹೂಗಾರ. ದೇಸಾಯಿ ಕಲ್ಲೂರ. ವಾದ್ಯಸಹಕಾರ ನೀಡಿದರು. ಕಾರ್ಯಕ್ರಮವನ್ನು ಸಂಸ್ಥೆಯ ಅಧ್ಯಕ್ಷರಾದ ಶಿವಾನಂದ ಮಂದೆವಾಲ ನಿರೂಪಿಸಿದರು. ಶಿವಕುಮಾರ್ ಪಾಟೀಲ್ ಕುಕನೂರ ಪ್ರಾರ್ಥಿಸಿದರು ಚಂದನ ವಂದಿಸಿದರು ಕಾರ್ಯಕ್ರಮದಲ್ಲಿ ಬಡಾವಣೆಯ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿ ಗೊಳಿಸಿದರು.

ಅಜ್ಜ, ಅಜ್ಜಿಯರಿಗೆ ಪಾದಪೂಜೆ

ಕಲಬುರಗಿ,: ನಗರದ ಶಂಕರಗೌಡ ಪೊಲೀಸ್ ಪಾಟೀಲ್ ಕನ್ನಡ ಮಾಧ್ಯಮ ಮತ್ತು ಆಂಗ್ಲ ಮಾಧ್ಯಮ ಶಾಲೆಯಲ್ಲಿ ಎಲ್ ಕೆ ಜಿ ಮತ್ತು ಯುಕೆಜಿ ಮಕ್ಕಳಿಂದ ಅಜ್ಜ ಮತ್ತು ಅಜ್ಜಿಯಂದಿರ ದಿನದ ಪ್ರಯುಕ್ತವಾಗಿ ಪಾದ ಪೂಜೆಯನ್ನು ಹಮ್ಮಿಕೊಳ್ಳಲಾಯಿತು. ವಿದ್ಯಾರ್ಥಿಗಳ ಅಜ್ಜ ಅಜ್ಜಿ ಮತ್ತು ಪಾಲಕರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಶಿಕ್ಷಕರಾದ ಸುಮನ್ ಹಾಗೂ ರೇಖಾ ಕಾರ್ಯಕ್ರಮವನ್ನು ನಿರೂಪಿಸಿದರು.ಕಾರ್ಯಕ್ರಮದ ನಂತರ ಅಜ್ಜ ಅಜ್ಜಿ ಹಾಗೂ ಮೊಮ್ಮಕ್ಕಳಿಗೆ ಆಟವನ್ನು ಆಡಿಸುವುದರ ಮೂಲಕ ಪ್ರಥಮ,ದ್ವಿತೀಯ ಹಾಗೂ ತೃತೀಯ ಸ್ಥಾನವನ್ನು ಪಡೆದವರಿಗೆ ಸಂಸ್ಥೆಯ ವತಿಯಿಂದ ಪ್ರಶಸ್ತಿಯನ್ನು ನೀಡಲಾಯಿತು. ಈ ಕಾರ್ಯಕ್ರಮದ ಪಾದ ಪೂಜೆಗೆಸಹಾಯಕರಾಗಿ ಮಂಜುಳಾ ಹಾಗೂ ರೀನಾ, ಮುಖ್ಯ ಗುರುಗಳಾದ ರವಿಚಂದ್ರ.ಎಲ್. ಮಂದೇವಾಲ ಉಪಸ್ಥಿತರಿದ್ದರುಶಂಕರಗೌಡ ಪೊಲೀಸ್ ಪಾಟೀಲ್ ಸಂಸ್ಥೆ ಅಧ್ಯಕ್ಷ ಜಿ ಎಸ್ ಪಾಟೀಲ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಪತ್ರಿಕೋದ್ಯಮ ಪ್ರಜಾಪ್ರಭುತ್ವದ ಮೂಲಾಧಾರ: ಡಾ. ಸತ್ಯಂಪೇಟೆ

ಕಲಬುರಗಿ: ಇಂದಿನ ಕಾಲದಲ್ಲಿ ಪತ್ರಿಕೋದ್ಯಮದ ಮಹತ್ವವನ್ನು ಕಡೆಗಣಿಸುವಂತಿಲ್ಲ. ಇಂದಿನ ಆಧುನಿಕ ಯುಗದಲ್ಲಿ ಪ್ರಜಾಪ್ರಭುತ್ವದ ಮೂಲಾಧಾರವಾಗಿರುವ ಇದು ಸಮಾಜದಲ್ಲಿ ಮತ್ತು ಪ್ರಪಂಚದಾದ್ಯಂತ ನಡೆಯುತ್ತಿರುವ ಘಟನೆಗಳ ಬಗ್ಗೆ ಜನರಿಗೆ ತಿಳಿಹೇಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಡಾ. ಶಿವರಂಜನ ಸತ್ಯಂಪೇಟೆ ಯವರು ಹೇಳಿದರು.

ಹೈದರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಶ್ರೀಮತಿ ವೀರಮ್ಮ ಗಂಗಸಿರಿ ಮಹಿಳಾ ಮಹಾವಿದ್ಯಾಲಯದ ಹಿಂದಿ ವಿಭಾಗದ ವತಿಯಿಂದ ಆರಂಭಿಸಲಾದ "ಪತ್ರಿಕೋದ್ಯಮ" ವ್ಯಾಲ್ಯೂ ಅಡೆಡ್ ಕೋರ್ಸ್ ಅನ್ನು ಉದ್ಘಾಟಿಸಿ ಮಾತನಾಡಿದರು.

ಮುಂದುವರೆದು ಇಂದಿನ ಡಿಜಿಟಲ್ ಯುಗವು ಮುಂದುವರೆದಂತೆ, ಪತ್ರಿಕೋದ್ಯಮವು ಕೆಲವು ನಿರ್ಣಾಯಕ ರೂಪಾಂತರಗಳನ್ನು ತನಲ್ಲಿ ಅಳವಡಿಸಿಕೊಂಡಿದೆ ಎಂದು ಹೇಳಿದರು. ಸಂವಿಧಾನದ 4 ನೇ ಅಂಗ ಎಂದೇ ಕರೆಯಲ್ಪಡುವ ಪತ್ರಿಕಾರಂಗ ಇಂದು ಉದ್ಯಮವಾಗಿ ಬೆಳೆದಿದೆ.ಶಾಸಕಾಂಗ,ಕಾರ್ಯಾಂಗ, ನ್ಯಾಯಾಂಗ ಹಾದಿ ತಪ್ಪಿದಾಗ ಸರಿ ದಾರಿಗೆ ತರುವ ಕೆಲಸ ಮಾಡುವ ಪತ್ರಿಕಾ ರಂಗ ಇಂದು ಟಿಆರ್ಪಿ ಗೆ ಬೆನ್ನು ಬೀಳುತ್ತಿರುವದಕ್ಕೆ ಖೇದ ವ್ಯಕ್ತಪಡಿಸಿದರು.

ಪ್ರಜಾಪ್ರಭುತ್ವದ ಕಾವಲು ನಾಯಿಯಾಗಿರುವ ಪತ್ರಿಕಾರಂಗ ಇಂದು ಧನಾತ್ಮಕ ವಿಚಾರಗಳಿಗೆ ಮಹತ್ವ ಕೊಡಬೇಕಾಗಿದೆ ಎಂದು ಹೇಳಿದರ.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯರಾದ ಡಾ. ರಾಜೇಂದ್ರ ಕೊಂಡಾ ವಹಿಸಿಕೊಂಡು ಪತ್ರಿಕೋದ್ಯಮದ ಕುರಿತು ಆರಂಭವಾದ ಈ ವ್ಯಾಲ್ಯೂ ಅಡ್ಡೆಡ ಕೋರ್ಸ್ ದಿಂದ ವಿದ್ಯಾರ್ಥಿಗಳಿಗೆ ಬಹಳ ಆವಶ್ಯಕವಾದ ಜ್ಞಾನ ದೊರಕಲಿದೆ ಎಂದು ನುಡಿದರು.

ವಿಭಾಗದ ಮುಖ್ಯಸ್ಥರಾದ ಡಾ ಪ್ರೇಮಚಂದ ಚವ್ಹಾಣ ಅವರು ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಲಗನ್ನಾಡಿದರು.

ವಿಭಾಗದ ಉಪನ್ಯಾಸಕಿ ಶ್ರೀಮತಿ ಕವಿತಾ ಠಾಕೂರ್ ಅವರು ಕಾರ್ಯಕ್ರಮ ನಿರೂಪಿಸಿದರು ಮತ್ತು ಶ್ರೀಮತಿ ಸುಷ್ಮಾ ಕುಲಕರ್ಣಿಯವರು ವಂದಿಸಿದರು, ಕುಮಾರಿ ಸಾಕ್ಷಿ ಜೈನ್ ಅವರು ಪ್ರಾರ್ಥನಾ ಗೀತೆ ಹಾಡಿದರು.

ಕಾರ್ಯಕ್ರಮದಲ್ಲಿ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಮಾಧ್ಯಮ ಸಂಯೋಜಕ ಐ ಕೆ ಪಾಟೀಲ್ ಕಾಲೇಜಿನ ಡಾ. ಮಹೇಶ ಗಂವ್ಹಾರ, ಡಾ. ಮೋಹನರಾಜ ಪತ್ತಾರ, ಶ್ರೀಮತಿ ಶಿವಲೀಲಾ ಧೋತ್ರೆ, ಹಲವಾರು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ರಕ್ತದಾನ ಮೂಲಕ ಸಮಾಜಮುಖಿ ಸೇವೆಗೆ ಚಾಲನೆ

ಕಲಬುರಗಿ .ನಗರದ ರೋಟರಿ ಹಾಲ್ ನಲ್ಲಿ ಇನ್ನರ್ ವೀಲ್ ಕ್ಲಬ್ ಆಫ್ ಗುಲ್ಬರ್ಗಾ ನಾರ್ತ್ ಮತ್ತು ಜಿಮ್ಸ್ ರಕ್ತ ನಿಧಿ ಕೇಂದ್ರದ ಸಂಯುಕ್ತಶ್ರಾಯದಲ್ಲಿ, ಇನ್ನರ್ ವೀಲ್ ಕ್ಲಬ್ ಆಫ್ ಗುಲ್ಬರ್ಗಾ ನಾರ್ತ್ ಅಧ್ಯಕ್ಷರಾದ ಸವಿತಾ ಹನಗೋಡಿಮಠ , ಕಾರ್ಯದರ್ಶಿ ನಮ್ರತಾ ಘಟಾಟೆ, ಡಾ.ಸಂಧ್ಯಾ ಕನೆಕರ್, ಲಕ್ಷ್ಮಿ ಅಡಕಿ, ಪ್ರೀಯಾಂಕ ಮುಗಳಿ, ಪುಷ್ಪ ಮೋಟಗಿ, ಸವಿತಾ ಹಾಲ್ಲಲ್ಲಿ, ಜಯಾ ಜೈನ್, ಸುನಿತಾ ಹೊಸಹಳ್ಳಿ,ಶ್ರೀದೇವಿ ನಾಗನಹಳ್ಳಿ, ಮತ್ತು ಅವರ ತಂಡದವರು ರಕ್ತದಾನ ಮಾಡುವುದರ ಮೂಲಕ ಕ್ಲಬ್ ನ ಸದಸ್ಯರಗಳು ಇತರೆ ಸ್ವಯಂ ಸೇವಕರಿಗೆ ಸೇರಿ ಕ್ಲಬ್ ವತಿಯಿಂದ ಪ್ರಮಾಣ ಪತ್ರ ನೀಡಲಾಯಿತು. ಜಿಮ್ಸ್ ಸರ್ಕಾರಿ ಆಸ್ಪತ್ರೆಯ ರಕ್ತನಿಧಿ ಕೇಂದ್ರ ಸಿಬ್ಬಂದಿ ವರ್ಗದವರಾದ ಡಾ. ಮಮತ ಪ್ಪಿ ಪಾಟೀಲ್ .

ಟೈಕ್ನಿಷನ್ ಆಫಿಸರ್ ಶಬ್ಬಿರ್ ಅಹ್ಮದ್, ಅಪ್ತ ಸಮಾಲೋಚಕ ಮಲ್ಲಿಕಾರ್ಜುನ ಪರಿಟ್, ಮತ್ತು ಇತರರು ಇದ್ದರು.

ವೀರೇಂದ್ರ ಹೆಗಡೆಯವರು ಸಮಾಜದ ಒಳತಿಗಾಗಿ ತಮ್ಮ ಸರ್ವಸ್ವ ಮುಡುಪಾಗಿಟ್ಟವರು

ಕಲಬುರಗಿ : ವೀರೇಂದ್ರ ಹೆಗಡೆಯವರು ಸಮಾಜದ ಒಳತಿಗಾಗಿ ತಮ್ಮ ಸರ್ವಸವನ್ನು ಮುಡುಪಾಗಿಟ್ಟವರು. ಸಾಮಾಜಿಕ ಕಾರ್ಯಕ್ರಮಗಳ ಸಮಾಜದ ಕಟ್ಟ ಕಡೆಯ ಜನರಿಗೆ ಕೂಡ ಸೇವೆ ನೀಡಿ ಉತ್ತಮ ಬದುಕು ಕಲ್ಪಿಸಿಕೊಟ್ಟವರು ಇವರು ರಾಜ್ಯಕ್ಕೆಲ್ಲಾ ದೇಶಕ್ಕೆಲ್ಲ ಇಡೀ ವಿಶ್ವಕ್ಕೆ ಮಾದರಿ ಆಗಿದ್ದಾರೆ ಎಂದು ಜಿಲ್ಲಾ ನಿರ್ದೇಶಕರಾದ ಗಣಪತಿ ಮಾಳಂಜಿ ಅವರು ಹೇಳಿದರು.

ಕಲಬುರಗಿ ಮಹಾನಗರದ ನ್ಯೂ ಜೈತೀರ್ಥ ಕಲ್ಯಾಣ ಮಂಟಪದಲ್ಲಿ ಕಲಬುರಗಿ ತಾಲೂಕ ಮಟ್ಟದ ಒಕ್ಕೂಟ ಪದಾಧಿಕಾರಿಗಳ ಸಮಾವೇಶದಲ್ಲಿ ಜ್ಯೋತಿ ಬೆಳಗಿಸಿವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಬಿಒಬಿ ಬ್ಯಾಂಕಿನ ಮ್ಯಾನೇಜರ್ ಆದ ಮನಿಶ್ ಸಿಂಗ್ ಅವರು ಮಾತನಾಡಿ ಧರ್ಮಸ್ಥಳ ಸಂಸ್ಥೆಯ ಬ್ಯಾಂಕಿನ ಮೂಲಕ ಆರ್ಥಿಕ ಸಹಾಯ ಮಾಡುತ್ತದೆ ಇವತ್ತು ಬ್ಯಾಂಕ್ ಯೋಜನೆ ಮೇಲೆ ವಿಶ್ವಾಸ ಇಟ್ಟು ದೊಡ್ಡ ಮೊತ್ತದ ಸಾಲ ನಿಮಗೆ ನೀಡುತ್ತಿದೆ ಅದರಿಂದ ತಾವೆಲ್ಲರೂ ಯೋಜನೆಯ ಜೊತೆಗೆ ವಿಶ್ವಾಸ ಇಟ್ಟು ಕೆಲಸ ಮಾಡಬೇಕಿದೆ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಲ್ಲಿ ನೀವೆಲ್ಲರೂ ಮಾಡಿಕೊಂಡಿರುವ ಸ್ವಸಹಾಯ ಸಂಘಗಳು ನಮ್ಮ ಬಿಒಬಿ ಬ್ಯಾಂಕಿನಿಂದ ಸರ್ವಿಸ್ ನೀಡಲಾಗುತ್ತಿದ್ದು ಸಂಘಗಳಿಗೆ ನೀಡುವ ಸಾಲ ಬ್ಯಾಂಕಿನಿಂದ ನೀಡಲಾಗಿದ್ದು ಬ್ಯಾಂಕಿನ ಕುರಿತು ವಿವರಣೆ ನೀಡಿದರು.

ಜಿಲ್ಲಾ ಜನ ಜಾಗೃತಿ ವೇದಿಕೆಯ ಸದಸ್ಯರಾದ ಶ್ರೀ ಗುರುಬಸಪ್ಪ ಸಜ್ಜನಶೆಟ್ಟಿಯವರು ಮಾತನಾಡಿ ಧರ್ಮಸ್ಥಳ ತುಂಬಾ ದೂರ ಇದ್ದು ಒಂದು ಮಲೆನಾಡು ಇರುವ ಕ್ಷೇತ್ರ ಅಂದರೆ ಪೂಜ್ಯರು ಕಲಬುರಗಿಗೆ ಈ ಸಂಸ್ಥೆ ತಂದು ಇಲ್ಲಿ ಮಲೆನಾಡು ಕ್ಷೇತ್ರವನ್ನಾಗಿ ಕೆಲಸ ಮಾಡುತ್ತಿದ್ದಾರೆ ಈ

ಸಂಸ್ಥೆಯಲ್ಲಿ ಮಹಿಳೆಯರು ಆರ್ಥಿಕ ಶಿಸ್ತು ಮತ್ತು ಸಾಮಾಜಿಕ ಶಿಸ್ತು ತಂದಿದ್ದರಿಂದ ಇವತ್ತು ಸಂಘದ ಸದಸ್ಯರು ತಮ್ಮ ಅವಶ್ಯಕತೆಗೆ ತಕ್ಕಂತೆ ದೊಡ್ಡ ಮಟ್ಟದ ಸಾಲ ವ್ಯವಹಾರ ಮಾಡುವಷ್ಟು ಬೆಳೆದಿದ್ದಾರೆ ಎಂದು ಸಭೆಯ ಉದ್ದೇಶಿಸಿ ಮಾತನಾಡಿದರು.

ಕಾರ್ಯಕ್ರಮ ಅಧ್ಯಕ್ಷತೆಯನ್ನು ಜಿಲ್ಲಾ ಜನಜಾಗೃತಿ ವೇದಿಕೆಯ ಅಧ್ಯಕ್ಷರಾದ ಸಿ ಎನ್ ಬಬಳಗಾವ ಅವರು ವಹಿಸಿ ಧರ್ಮಸ್ಥಳ ಯೋಜನೆ ಮಾಡುವ ಸಮಾಜಮುಖಿ ಕಾರ್ಯಗಳು ಬಗ್ಗೆ ಮಾಹಿತಿ ನೀಡಿ ರಾಜ್ಯದಲ್ಲೆಲ್ಲ ದೇಶದಲ್ಲಿ ಈ ರೀತಿ ಕೆಲಸ ಮಾಡುವ ಯಾವುದಾದರೂ ಸಂಸ್ಥೆ ಇದೆ ಅಂದರೆ ಅದುವೇ ಧರ್ಮಸ್ಥಳ ಸಂಸ್ಥೆ ಮಾತ್ರ ಎಂದು ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾರ್ಯಕ್ರಮ ನಿರೂಪಣೆಯನ್ನು ಮಮತಾ ಪ್ರವೀಣ್ ಮಾಡಿದ್ದರು ಸ್ವಾಗತ ಕಲಬುರಗಿ ತಾಲೂಕ ಯೋಜನಾಧಿಕಾರಿ ಗಳಾದ ರಿಯಾಜ್ ಅತ್ತಾರ ಅವರು ಮಾಡಿದರು. ವಂದನೆಯನ್ನು ಕಲಬುರಗಿ ತಾಲೂಕ ಕೃಷಿ

ಮೇಲ್ವಿಚಾರಕರಾದ ಗಂಗಾಧರ್ ಮೇಲಿನಮನಿ ಅವರು ಗೈದರು. ಕಾರ್ಯಕ್ರಮದಲ್ಲಿ ಯೋಜನೆಯ ಸಿಬ್ಬಂದಿ ವರ್ಗದವರಾದ ಮೇಲ್ವಿಚಾರಕರಾದ ಬಿಸಯ್ಯ,ಸುಮಿತ್ರಾ ಹಿರೇಮಠ, ದೀಪಾಶಿಂದೆ,ವೀರೇಶ್,ಜಗನ್ನಾಥ,ಭೀಮರಾಯ ಸಿ, ರಾಜಕುಮಾರ್, ಮಲ್ಲಿಕಾರ್ಜುನ, ಶರಣಬಸು,ಉಪಸ್ಥಿತರಿದ್ದರು

ಪ್ರವಾಸೋದ್ಯಮಕ್ಕೆ ಹೋಟೆಲ್ ಉದ್ಯಮಿಗಳ ಕೊಡುಗೆ ಅಪಾರ: ಅಲ್ಲಮ ಪ್ರಭು

ಕಲಬುರಗಿ : ಕಲ್ಯಾಣ ಕರ್ನಾಟಕದ ಹೆಬ್ಬಾಗಿಲು ಕಲಬುರ್ಗಿಯಲ್ಲಿ ಪ್ರವಾಸೋದ್ಯಮದ ಬೆಳವಣಿಗೆಗೆ ಹೋಟೆಲ್ ಉದ್ಯಮಿಗಳ ಕೊಡುಗೆ ಅಪಾರವಾಗಿದೆ ಎಂದು ಶಾಸಕ ಅಲ್ಲಮ ಪ್ರಭು ಪಾಟೀಲ್ ಹೇಳಿದರು.

ಕಲ್ಬುರ್ಗಿಯಲ್ಲಿ ಅಕ್ಟೋಬರ್ 18ರಂದು ಹೋಟೆಲ್ ಮಯೂರ್ ಬಹುಮನಿಯ ಯಾತ್ರಿಕ್ ನಿವಾಸ ಸಭಾಂಗಣದಲ್ಲಿ ನಡೆದ ಕಲ್ಬುರ್ಗಿ ಜಿಲ್ಲಾ ಹೋಟೆಲ್ ವಸತಿ ಮತ್ತು ಬೇಕರಿಗಳ ಅಸೋಸಿಯೇಷನ್ ನ ನೂತನ ಅಧ್ಯಕ್ಷರಾದ ನರಸಿಂಹ ಮೆಂಡನ್ ಅವರಿಗೆ ಸನ್ಮಾನ ನೆರವೇರಿಸಿ ಮಾತನಾಡಿ ಕಲ್ಬುರ್ಗಿಯಲ್ಲಿ ಪೊಲೀಸ್ ಅಕಾಡೆಮಿ ತರಬೇತಿ ಕೇಂದ್ರ ನಾಲ್ಕು ವಿಶ್ವವಿದ್ಯಾಲಯಗಳು ಇಎ□□ಐ ಜಿಮ್ಸ್ ಜಯದೇವ ಆಸ್ಪತ್ರೆಗಳು ಹಾಗೂ ಸದ್ಯದಲ್ಲೇನೂತನಜವಳಿಪಾರ್ಕ್ ಆರಂಭವಾಗುವುದರಿಂದ ಪ್ರವಾಸೋದ್ಯಮ ರಂಗಕ್ಕೆ ಇಲ್ಲಿ ಹೇರಳ ಅವಕಾಶವಿದ್ದು ಹೋಟೆಲ್ ಉದ್ಯಮಿಗಳು ಉತ್ತಮ ಆಹಾರ, ವಸತಿ ವ್ಯವಸ್ಥೆ ಕಲ್ಪಿಸಿ ಅವಕಾಶವನ್ನು ಬಳಸಿಕೊಳ್ಳಬೇಕು ಹೋಟೆಲ್ ಉದ್ಯಮಿಗಳ ಸಮಸ್ಯೆಗಳಿಗೆ ಪ್ರಾಮಾಣಿಕ ಸ್ಪಂದನೆ ಮಾಡುವುದಲ್ಲದೆ ಈ ಕ್ಷೇತ್ರದ ಅಭಿವೃದ್ಧಿಗೆ ನೂತನ ಸಮಿತಿಯ ಜೊತೆ ವಿಸ್ತೃತ ಚರ್ಚೆ ನಡೆಸಲು ಸದಾ ಸಿದ್ಧ ಎಂದು ಹೇಳಿದರು.

ಪ್ರವಾಸೋದ್ಯಮ ಅಭಿವೃದ್ಧಿಗೆ ನಿಯೋಗ ಅಗತ್ಯ:

ಆಕಾಶವಾಣಿಯ ನಿವೃತ್ತ ಹಿರಿಯ ಕಾರ್ಯಕ್ರಮ

ನಿರ್ವಹಣಾಧಿಕಾರಿ ಡಾ. ಸದಾನಂದ ಪೆರ್ಲ ಮಾತನಾಡಿ ಹೋಟೆಲ್ ಉದ್ಯಮ ರಂಗವು ಬೆಳೆಯಲು ಪರಿಶ್ರಮದ ದುಡಿಮೆ ಮತ್ತು ಕಾಯಕವೇ ಕೈ

ಸೈಬರ್ ಅಪರಾಧ, ಸುರಕ್ಷತೆ ಕಾರ್ಯಕ್ರಮ

ಕಲಬುರಗಿ, : ನಗರದ ಬಿ ಶ್ಯಾಮ್ ಸುಂದರ್ ನಗರ ಬಡಾವಣೆಯಲ್ಲಿ ಸೈಬರ್ ಅಪರಾಧ ಮತ್ತು ಸುರಕ್ಷತೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಬ್ರಹ್ಮಪುರ ಪೊಲೀಸ್ ಠಾಣಾ ಸಿಬ್ಬಂದಿಗಳು ಭಾಗವಹಿಸಿದ್ದರು.

ಉಪ ಆರಕ್ಷಕ ನಿರೀಕ್ಷಕ ಶಿವಶರಣಪ್ಪ ಗೊಡಕಿ, ಪೊಲೀಸ್ ಕಾನ್‌ಸ್ಟೇಬಲ್ ಸಂಗಣ್ಣ ಚಿಟಗಿ ಹಾಗೂ ಬಡಾವಣೆಯ ಹಿರಿಯ ಮುಖಂಡರಾದ ಲಕ್ಷ್ಮಣ ಮೂಲ ಭಾರತಿ, ಶ್ರೀಕಾಂತ್ ಕಡುನ್, ಶಿವಶರಣಪ್ಪ ಶಿಂದೆ, ರಾಕೇಶ್ ಶಿಂದೆ ಹಾಗೂ ಬಡಾವಣೆಯ ಅಧ್ಯಕ್ಷರಾದ ಶರಣು ಹುಬ್ಬಳ್ಳಿ ಅವರ ನೇತೃತ್ವದಲ್ಲಿ ಕಾರ್ಯಕ್ರಮ ಜರಗಿತು.

ಈ ಕಾರ್ಯಕ್ರಮಕ್ಕೆ ಲರ್ನಿಂಗ್ ಲಿಂಕ್ಸ್ ಫೌಂಡೇಶನ್ ಕಂಪನಿಯ ಮತ್ತು ಡೆಲ್ ಟೆಕ್ನಾಲಜಿಯ ಸಹಕಾರದೊಂದಿಗೆ ಈ ಕಾರ್ಯಕ್ರಮವನ್ನು ದಯಾನಂದ್ ಸಾವಳಕರ್ ಅವರು ನಡೆಸಿಕೊಟ್ಟರು. ಬಡಾವಣೆಯ ಎಲ್ಲಾ ಹಿರಿಯ ಕಿರಿಯರು ನಾಗರಿಕರು ಭಾಗವಹಿಸಿದರು

ಜೈಲಿನೊಳಗೆ ಗುಟ್ಕಾ, ಬೀಡಿ, ಸಾಗಣೆ ಯತ್ನ: ನಿಷೇಧಿತ ವಸ್ತುಗಳನ್ನು ಒಳಗೊಂಡ ಚೆಂಡುಗಳು ಪತ್ತೆ!

ಕಲಬುರಗಿ, : ಇಲ್ಲಿನ ಕಲಬುರಗಿ ಸೆಂಟ್ರಲ್ ಜೈಲಿನ ಒಳ ಗೋಡೆ ಬಳಿ ನಿಷೇಧಿತ ತಂಬಾಕು ವಸ್ತುಗಳ ಪತ್ತೆಯಾಗಿದ್ದು, ಈ ಕುರಿತು ಫರಹತಾಬಾದ್ ಪೊಲೀಸ್ ಠಾಣೆಯಲ್ಲಿ ಮತ್ತೊಂದು ಪ್ರಕರಣ ದಾಖಲಾಗಿದೆ.

ಜೈಲಿನ ಒಳಭಾಗದ ಗೋಡೆಗಳ ಬಳಿ ಚೆಂಡಿನ ಆಕಾರದ ಪ್ಲಾಸ್ಟಿಕ್ ಚೀಲಗಳಿಂದ ಮಾಡಿದ ಉಂಡೆಗಳು ಪತ್ತೆಯಾಗಿದ್ದು, ಈ ಉಂಡೆಗಳಲ್ಲಿ ತಂಬಾಕು, ಗುಟ್ಕಾ, ಬೀಡಿ, ಪಾನ್ ಮಸಾಲಾ ಸೇರಿದಂತೆ ನಿಷೇಧಿತ ವಸ್ತುಗಳನ್ನು ಇರಿಸಲಾಗಿತ್ತು ಎನ್ನಲಾಗಿದೆ.

ಜೈಲಿನಲ್ಲಿರುವ ಪರಿಚಿತ ಕೈದಿಗಳಿಗೆ ತಲುಪುವಂತೆ ನಿಷೇಧಿತ ವಸ್ತುಗಳನ್ನು ಒಳಗೊಂಡ ಇಂತಹ ಚೆಂಡುಗಳನ್ನು ಕಿಡಿಗೇಡಿಗಳು ಎಸೆದು ಪರಾರಿಯಾಗುವ ರೂಢಿ ಈ ಹಿಂದಿನಿಂದಲೂ ಚಾಲ್ತಿಯಲ್ಲಿದ್ದು, ಇದೇ ಮೊದಲ ಬಾರಿಗೆ ಈ ಪ್ಲಾಸ್ಟಿಕ್ ಚೀಲಗಳಿಂದ ಮಾಡಿರುವ ಚೆಂಡುಗಳು ಜೈಲು ಸಿಬ್ಬಂದಿ ಕಣ್ಣಿಗೆ ಬಿದ್ದಿದೆ ಎನ್ನಲಾಗುತ್ತಿದೆ.

ಜೈಲು ಸಿಬ್ಬಂದಿ ಸಂಗೀತಾ ಸಂಶಯಾಸ್ಪದ ರೀತಿಯಲ್ಲಿ ಕಂಡುಬಂದ ಈ ಚೆಂಡುಗಳನ್ನು ಗಮನಿಸಿದ ಕೂಡಲೆ ಜೈಲಿನ ಅಧೀಕ್ಷಕಿ ಅನಿತಾ ಅವರ ಗಮನಕ್ಕೆ ತಂದಿದ್ದಾರೆ. ನಂತರ ಆ ಚೆಂಡಿನ ಆಕಾರದ ಉಂಡೆಗಳನ್ನು ಬಿಡಿಸಿ ನೋಡಿದಾಗ ಗುಟ್ಕಾ, ಬೀಡಿ ಹಾಗೂ ಪಾನ್ ಮಸಾಲಾ ಸೇರಿದಂತೆ ಇತರ ವಸ್ತುಗಳು ಪತ್ತೆಯಾಗುತ್ತಿದ್ದಂತೆಯೇ ತಕ್ಷಣ ಫರಹತಾಬಾದ್ ಪೊಲೀಸ್ ಠಾಣೆಗೆ ಮಾಹಿತಿ ತಲುಪಿಸಲಾಗಿದೆ.

ಈಗಾಗಲೇ ಮೊಬೈಲ್ ಬಳಕೆ, ಹನಿಟ್ರ್ಯಾಪ್ ಹಾಗೂ ಜೈಲು ಸಿಬ್ಬಂದಿ ಮತ್ತು ಕೈದಿಗಳಿಗೆ ಕೆಲವು ಕೈದಿಗಳು ಬ್ಲಾಕ್ ಮೇಲ್ ಮಾಡುತ್ತಿರುವ ವಿದ್ಯಮಾನಗಳು ಇಡೀ ರಾಜ್ಯದ ಗಮನ ಸೆಳೆದ ಬೆನ್ನಲ್ಲಿಯೇ, ಕಾರಾಗೃಹ ಎಡಿಜಿಪಿ ಮಾಲಿನಿ ಕೃಷ್ಣಮೂರ್ತಿ ಹಾಗೂ ಇದೇ ಕಚೇರಿಯ ಎಸ್ಪಿ ಯಶೋಧಾ ಕಲಬುರಗಿ ಜೈಲಿಗೆ ದಿಢೀರ್ ಭೇಟಿ ನೀಡಿ ಮಾಹಿತಿ ಕಲೆ ಹಾಕಿದ್ದಾರೆ. ಈ ಬೆಳವಣಿಗೆಯ ಬೆನ್ನಲ್ಲೇ ಜೈಲರ್ ಗಳಾದ ಶಹನಾಜ್ ನೀಗೆವಾನ್ ಹಾಗೂ ಪರಮಾನಂದ ಅವರನ್ನು ಅಮಾನತುಗೊಳಿಸಲಾಗಿದೆ. ಹಾಗಾಗಿ, ಇದೀಗ ನಿಷೇಧಿತ ವಸ್ತುಗಳನ್ನು ಅಕ್ರಮವಾಗಿ ಜೈಲಿನೊಳಗೆ ಎಸೆಯುವ ಜಾಲದ ಕುರಿತು ಮತ್ತೊಂದು ಸುತ್ತಿನ ತನಿಖೆ ನಡೆಸಲಾಗುತ್ತಿದೆ ಎಂದು ಹೇಳಲಾಗುತ್ತಿದೆ.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: 2024–25ನೇ ಸಾಲಿನ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಅಲೆಮಾರಿ–ಅರೆ ಅಲೆಮಾರಿ ಪ್ರವರ್ಗ–1 ವಿದ್ಯಾರ್ಥಿಗಳಿಂದ ಅರ್ಹ ಪಿಯುಸಿ ಸಮಾನಾಂತರ, ಸಾಮಾನ್ಯ ಪದವಿ ಮತ್ತು ಸಂಯೋಜಿತ ಉಭಯ ಪದವಿ ಕೋರ್ಸ್‌ಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಶುಲ್ಕ ವಿನಾಯಿತಿ, ವಿದ್ಯಾಸಿರಿ–ಊಟ ಮತ್ತು ವಸತಿ ಸಹಾಯ ಯೋಜನೆಯಡಿ ಸೌಲಭ್ಯ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು ದಿನಾಂಕ : 31–10–2024ರವರೆಗೆ ವಿಸ್ತರಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾಯಿ ಕೊಂದ ಮಗನ ಬಂಧನ

ಕಲಬುರಗಿ,: ಸರಿಯಾಗಿ ಊಟ ಹಾಕುತ್ತಿಲ್ಲ ಎಂಬ ಕಾರಣಕ್ಕೆ ಬಡಿಗೆಯಿಂದ ಹೊಡೆದು ತಾಯಿಯನ್ನು ಮಗ ಕೊಲೆ ಮಾಡಿರುವ ಘಟನೆ ಚಿತ್ತಾಪುರ ತಾಲ್ಲೂಕಿನ ರಾಜೋಳ ಗ್ರಾಮದಲ್ಲಿ ನಡೆದಿದೆ.

ದೇವಕಮ್ಮ (65) ಎಂಬುವವರನ್ನೆ ಮಗ ಜಟ್ಟೆಪ್ಪ ದೊಡ್ಡ ಬೀರಪ್ಪ ಪೂಜಾರಿ ಕೊಲೆ ಮಾಡಿದ್ದಾನೆ ಎಂದು ತಿಳಿದುಬಂದಿದೆ.

ಈ ಸಂಬಂಧ ಕೊಲೆಯಾದ ದೇವಕಮ್ಮ ಅವರ ಪುತ್ರಿ ಬಸಮ್ಮ ಅವರು ಚಿತ್ತಾಪುರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ಜಟ್ಟೆಪ್ಪ ಪೂಜಾರಿ ಹೊಡೆ ಬಡೆ ಮಾಡುತ್ತಿದ್ದುದ್ದರಿಂದ 4–5 ವರ್ಷಗಳ ಹಿಂದೆ ಪತ್ನಿ ಮಾಲಾಶ್ರೀ ಮಕ್ಕಳನ್ನು ಕರೆದುಕೊಂಡು ತವರು ಮನೆಯಾದ ಹಂದ್ರಕಿ ಗ್ರಾಮಕ್ಕೆ ಹೋಗಿದ್ದು, ತಾಯಿ ದೇವಕಮ್ಮ ಅವರೊಂದಿಗೆ ವಾಸವಾಗಿದ್ದ. ಎರಡು ದಿನಗಳ ಹಿಂದೆ ದೇವಕಮ್ಮ ಅವರು ಮಗಳ ಗಂಡನ ಮನೆಯಾದ ಲಕ್ಷ್ಮೀಪುರವಾಡಿಗೆ ಹೋಗಿ ಅ.18 ರಂದು ರಾಜೋಳ ಗ್ರಾಮಕ್ಕೆ ಮರಳಿ ಬಂದಿದ್ದರು. ಈ ವೇಳೆ ಮಗ ಜಟ್ಟೆಪ್ಪ ತನಗೆ ಸರಿಯಾಗಿ ಊಟ ಹಾಕುತ್ತಿಲ್ಲ ಎಂದು ಕೋಪಿಸಿಕೊಂಡು ಬಡಿಗೆಯಿಂದ ಹೊಡೆದು ದೇವಕಮ್ಮ ಅವರನ್ನು ಕೊಲೆ ಮಾಡಿದ್ದಾನೆ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ಈ ದೂರಿನ ಅನ್ವಯ ಎಸ್‌ಪಿ ಅಡ್ಡೂರು ಶ್ರೀನಿವಾಸಲು, ಹೆಚ್ಚುವರಿ ಎಸ್‌ಪಿ ಎನ್.ಶ್ರೀನಿಧಿ, ಶಹಾಬಾದ ಉಪ ವಿಭಾಗದ ಡಿಸಿಪಿ ಶಂಕರಗೌಡ ಪಾಟೀಲ ಅವರ ಮಾರ್ಗದರ್ಶನದಲ್ಲಿ ಚಿತ್ತಾಪುರ ಸಿಪಿಐ ಚಂದ್ರಶೇಖರ ತಿಗಡಿ, ಪಿಎಸ್‌ಐ ಚಂದ್ರಾಮಪ್ಪ, ಸಿಬ್ಬಂದಿಗಳಾದ ಚಂದ್ರಶೇಖರ, ದತ್ತಾತ್ರೇಯ, ಸವಿಕುಮಾರ, ಬಸವರಾಜ, ಮಂಜುನಾಥ, ಈರೇಶ ಅವರನ್ನೊಳಗೊಂಡ ತಂಡ ರಚಿಸಲಾಗಿತ್ತು. ಈ ತಂಡ ತನಿಖೆ ನಡೆಸಿ ಪ್ರಕರಣ ದಾಖಲಾದ 6 ಗಂಟೆಯೊಳಗೆ ಆರೋಪಿ ಜಟ್ಟೆಪ್ಪನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಲ್ಲಿ ಯಶಸ್ವಿಯಾಗಿದೆ. ಪ್ರಕರಣ ದಾಖಲಾದ 6 ಗಂಟೆಯೊಳಗೆ ಕೊಲೆ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯಕ್ಕೆ ಮೇಲಾಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸ್ತನ ಕ್ಯಾನ್ಸರ್ ಜಾಗೃತಿ ಮಾಸದ ಅಂಗವಾಗಿ ಎಚ್‌ಸಿಜಿ ಕ್ಯಾನ್ಸರ್ ಸೆಂಟರ್ ವತಿಯಿಂದ ಬೈಕಥಾನ್ ಆಯೋಜನೆ

ಸ್ತನಕ್ಯಾನ್ಸರ್ ಬಗ್ಗೆ ಮಹಿಳೆಯರಲ್ಲಿ ಅರಿವು ಮೂಡಿಸುವುದು ಅಗತ್ಯ

■ ಉದಯರಶ್ಮಿ ದಿನಪತ್ರಿಕೆ

ಬೆಂಗಳೂರು: ಸ್ತನಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಬೆಂಗಳೂರು ಎಚ್‌ಸಿಜಿ ಕ್ಯಾನ್ಸರ್ ಸೆಂಟರ್ ವತಿಯಿಂದ "ಪಿಂಕ್ ವುಮೆನ್ಸ್" ಶೀರ್ಷಿಕೆಯಡಿ ಬೈಕಥಾನ್ ಆಯೋಜಿಸಿತ್ತು.

ಸ್ತನಕ್ಯಾನ್ಸರ್ ಜಾಗೃತಿ ಮಾಸದ ಅಂಗವಾಗಿ ನಡೆದ ಈ ಬೈಕಥಾನ್ ಕೆ.ಆರ್. ರಸ್ತೆಯ ಎಚ್‌ಸಿಜಿ ಕ್ಯಾನ್ಸರ್ ಕೇಂದ್ರದಿಂದ ಬೆಳಗ್ಗೆ 7 ಗಂಟೆಗೆ ಪ್ರಾರಂಭಗೊಂಡು, ಎಂ.ಜಿ. ರಸ್ತೆ, ಟ್ರಿನಿಟಿ ಸರ್ಕಲ್, ವಿಧಾನಸೌಧದ ಮುಂಭಾಗದಿಂದ ಹಾದು 10 ಕಿಲೋಮೀಟರ್ ದೂರದವರೆಗೆ ಸಾಗಿತು. 180ಕ್ಕೂ ಹೆಚ್ಚು ಮಹಿಳಾ ಬೈಕರ್ಸ್‌ಗಳು ಈ ಬೈಕಥಾನ್‌ನಲ್ಲಿ ಪಾಲ್ಗೊಂಡು, ಸ್ತನಕ್ಯಾನ್ಸರ್‌ನ ಬಗ್ಗೆ ಹಾಗೂ ಆರಂಭಿಕ ತಪಾಸಣೆಗೆ ಆದ್ಯತೆ ನೀಡುವ ಕುರಿತು ಜಾಗೃತಿ ಮೂಡಿಸಿದರು. ಇದಷ್ಟೇ ಅಲ್ಲದೆ, ಬೈಕಥಾನ್‌ಗೂ ಮುನ್ನ, ಜುಂಬಾ ಸೆಷನ್, ಮೈಕಲ್ ಜಾಕ್ಸನ್ ಅವರ "ಡೇಂಜರಸ್" ಪ್ರೇರಿತಗೊಂಡ ಸ್ಟೆಪ್ಸ್ ಹಾಕುವ ಮೂಲಕ ಸ್ತನ ಕ್ಯಾನ್ಸರ್ ಆರಂಭಿಕ ಪತ್ತೆಯ ಬಗ್ಗೆ "ಬೀಟ್ ಇಟ್" ಶೀರ್ಷಿಕೆಯ ಫಲಕಗಳನ್ನು ಹಿಡಿದು ವಿಭಿನ್ನವಾಗಿ ಜಾಗೃತಿ ಮೂಡಿಸಿದರು. ಎಚ್‌ಸಿಜಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮನೀಶಾ ಕುಮಾರ್, ಮೆಡಿಕಲ್ ಆಂಕೊಲಾಜಿಸ್ಟ್ ಡಾ. ರೋಶನಿ ದಾಸ್‌ಗುಪ್ತ, ಸರ್ಜಿಕಲ್ ಆಂಕೊಲಾಜಿಸ್ಟ್ ಡಾ ಮಹೇಶ್ ಬಂಡೇಮೆಗಲ್ ಈ ಬೈಕಥಾನ್‌ಗೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಮನೀಶಾ ಕುಮಾರ್, ಇತ್ತೀಚಿನ ದಿನಗಳಲ್ಲಿ ಮಹಿಳೆಯರಲ್ಲಿ ಹೆಚ್ಚಾಗಿ ಸ್ತನಕ್ಯಾನ್ಸರ್ ಕಾಡುತ್ತಿರುವುದು ಆತಂಕಕಾರಿ ಬೆಳವಣಿಗೆ. ಆರಂಭದಲ್ಲಿಯೇ ಈ ಕ್ಯಾನ್ಸರ್‌ನನ್ನು ಪತ್ತೆ ಹಚ್ಚಿದರೆ ಸುಲಭವಾಗಿ ಚಿಕಿತ್ಸೆ ಮೂಲಕ ಗುಣಪಡಿಸಬಹುದು. ನಾವಷ್ಟೇ ಜಾಗೃತರಾದೆ ಸಾಲದು, ನಮ್ಮ ಸುತ್ತಮುತ್ತ ಹಾಗೂ ಗ್ರಾಮೀಣ ಭಾಗದ ಮಹಿಳೆಯರಿಗೂ ಕೂಡ ಈ ಬಗ್ಗೆ ಅರಿವು ಮೂಡಿಸಬೇಕು. ಆಗಷ್ಟೇ ಎಲ್ಲರಿಗೂ ಸ್ತನಕ್ಯಾನ್ಸರ್‌ನ ಬಗ್ಗೆ ಜಾಗೃತಿ ಮೂಡಲಿದೆ. ಮಹಿಳಾ ಬೈಕರ್ಸ್‌ಗಳು ವಿಶೇಷವಾಗಿ ಬೈಕ್ ಸವಾರಿ ಮೂಲಕ ಈ ಬಗ್ಗೆ ಜಾಗೃತಿ ಮೂಡಿಸಿದ್ದು ಪ್ರಶಂಸನೀಯ ಎಂದರು.

ಮೆಡಿಕಲ್ ಆಂಕೊಲಾಜಿಸ್ಟ್ ಡಾ ರೋಶನಿ ದಾಸ್‌ಗುಪ್ತ ಮಾತನಾಡಿ, ಸ್ತನಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಿದಷ್ಟೂ ಈ ಬಗ್ಗೆ ಭಯಗೊಳ್ಳುವವರ ಸಂಖ್ಯೆಯೂ ಕಡಿಮೆಯಾಗಲಿದೆ. ಜನರು ಈ ಕ್ಯಾನ್ಸರ್‌ನ ಪ್ರಾರಂಭದಲ್ಲಿಯೇ ಪತ್ತೆ ಹಚ್ಚಿ, ಅದಕ್ಕೆ ಚಿಕಿತ್ಸೆ ಪಡೆದುಕೊಳ್ಳುವ ಮೂಲಕ ಈ ರೋಗದಿಂದ ಮುಕ್ತಿಗೊಂಡು ಎಂದಿನಂತೆ ಜೀವನ ನಡೆಸಬಹುದು, ಹೀಗಾಗಿ ಜನರು ಈ ಬಗ್ಗೆ ಹೆಚ್ಚು ಜಾಗೃತರಾಗುವುದು ಒಳಿತು ಎಂದು ಸಲಹೆ ನೀಡಿದರು.

ಸರ್ಜಿಕಲ್ ಆಂಕೊಲಾಜಿಸ್ಟ್ ಡಾ. ಮಹೇಶ್ ಬಂಡೇಮೆಗಲ್ ಮಾತನಾಡಿ, "ಸ್ತನ ಕ್ಯಾನ್ಸರ್ ಜಾಗೃತಿ ತಿಂಗಳಂದು ಪಿಂಕ್ ಮಹಿಳಾ ಬೈಕ್‌ಥಾನ್ 2024 ನಂತಹ ಕಾರ್ಯಕ್ರಮಗಳ ಮೂಲಕ ಜಾಗೃತಿ ಮೂಡಿಸುವ ಅವಶ್ಯಕತೆ ಹೆಚ್ಚಿದೆ. ಇದರಿಂದಲಾದರೂ ಮಹಿಳೆಯರು ಎಚ್ಚೆತ್ತುಕೊಳ್ಳುತ್ತಾರೆ ಎಂದು ಹೇಳಿದರು.

ಮಳೆಗೆ ಬೆಳೆ ಹಾನಿ ಸೂಕ್ತ ಪರಿಹಾರಕ್ಕೆ ಆಗ್ರಹ

ಕಲಬುರಗಿ: ವರುಣನ ಅವಾಂತರಕ್ಕೆ ಜೇವರ್ಗಿ ತಾಲೂಕು ಮತ್ತು ಜಿಲ್ಲೆಯ ರೈತರು ತತ್ತರಿಸಿ ಹೋಗಿದ್ದಾರೆ ರೈತರಿಗೆ ಸೂಕ್ತ ಪರಿಹಾರ ನೀಡುವಂತೆ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಪ್ರಶಾಂತಗೌಡ ಆರ್.ಮಾಲಿಪಾಟೀಲ ಆಗ್ರಹಿಸಿದ್ದಾರೆ.

ಕಲಬುರಗಿ ಜಿಲ್ಲೆಯಲ್ಲಿ ಮಳೆಯು ಮುಂದುವರೆದಿದ್ದು ಅಪಾರ ಪ್ರಮಾಣದ ಬೆಳೆಗಳು ಹಾನಿಯಾಗಿವೆ ಅವಾಂತರಿಂದ ಜಿಲ್ಲೆಯ ಹಲವು ತಾಲೂಕುಗಳಲ್ಲಿ ಹತ್ತಿ ಮತ್ತು ತೋಗರಿ ಬೆಳೆಯು ಹಾನಿಯಾಗಿದೆ. ಬಿರುಗಾಳಿ ಸಹಿತ ಮಳೆಗೆ ಜಿಲ್ಲೆಯ ಕಡೆ ಸಾವಿರಾರು ಎಕರೆ ಪ್ರದೇಶದ ಹತ್ತಿ ಮತ್ತು ತೋಗರಿ ಬೆಳೆಯು ನೆಲಕಚ್ಚಿ ಹಾನಿಯಾಗಿದೆ.

ಅದೆ ರೀತಿ ಹತ್ತಿ ಮತ್ತು ತೋಗರಿ ಬೆಳೆಯು ಬೆಳೆಯಲ್ಲಿ ನೀರು ಸಂಗ್ರಹವಾಗಿ ಹತ್ತಿ ಮತ್ತು ತೋಗರಿ ಬೆಳೆಯು ಹೆಚ್ಚಿನ ಪ್ರಮಾಣದಲ್ಲಿ ನಷ್ಟವಾಗಿದೆ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಬೆಳೆದಿದ್ದ ಹತ್ತಿ ಮತ್ತು ತೋಗರಿ ಬೆಳೆಯು ಹಾನಿಯಾಗಿ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಬೆಳೆ ಹಾನಿಯಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬಂದಿದೆ ಎಂದು ರೈತರು ಅಳಲು ತೋಡಿಕೊಂಡಿದ್ದಾರೆ. ಕೂಡಲೇ ಮಳೆಗೆ ಹಾನಿಗೊಳಗಾದ ರೈತರ ಹೊಲಗಳ ಸಮೀಕ್ಷೆ ಮಾಡಿ ಜಿಲ್ಲಾಡಳಿತ ಮತ್ತು ಸರಕಾರ ಹೆಚ್ಚಿನ ಪರಿಹಾರ ನೀಡಬೇಕು ಒಂದು ವೇಳೆ ವಿಳಂಬ ಮಾಡಿದ್ದಲ್ಲಿ ರಾಜ್ಯ ರೈತ ಸಂಘದ ವತಿಯಿಂದ ಉಗ್ರಹೋರಾಟ ಮಾಡಬೇಕಾಗುತ್ತದೆ ಎಂದು ಮಾಲಿಪಾಟೀಲ ಅವರು ಪ್ರಕಟಣೆಯ ಮೂಲಕ ಎಚ್ಚರಿಕೆ ನೀಡಿದ್ದಾರೆ.

ಚಾಕು ತೋರಿಸಿ ಮೊಬೈಲ್ ಸುಲಿಗೆ: ನಾಲ್ವರು ಯುವಕರ ಸೆರೆ

ಕಲಬುರಗಿ,: ಕಮಲಾಪುರ ಸಮೀಪದ ಎಜಿಪಿ ಗ್ಯಾಸ್ ಪಂಪ್ ಹತ್ತಿರ ವ್ಯಕ್ತಿಯೊಬ್ಬರ ಕುತ್ತಿಗೆಗೆ ಚಾಕು ಹಚ್ಚಿ ಓಪೊ ಎಫ್–17 ಮೊಬೈಲ್ ಸುಲಿಗೆ ಮಾಡಿದ ನಾಲ್ವರು ಯುವಕರನ್ನು ಬಂಧಿಸುವಲ್ಲಿ ಕಮಲಾಪುರ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಕಲಬುರಗಿಯ ಗಂಗಾ ನಗರದ ಅಭಿಜೀತ್ ತಂದೆ ಮಲ್ಲಾರ್ ಪಾಟೀಲ (19), ಶಾಂತಿ ನಗರದ ಅಹ್ಮದ್ ಕೈಫ್ ತಂದೆ ಮೌಲಾ ಶೇಖ್ (20), ಸಿಐಬಿ ಕಾಲೋನಿಯ ನಾಗರಾಜ ತಂದೆ ಮಲ್ಲಿನಾಥ ಜಾನ್ (21) ಮತ್ತು ಕಮಲಾಪುರ ತಾಲ್ಲೂಕಿನ ಜೀವಣಗಿ ಗ್ರಾಮದ ಚಂದನ್ ತಂದೆ ಮಲ್ಲಿಕಾರ್ಜುನ ಸುಗೂರ (20) ಎಂಬುವವರನ್ನು ಬಂಧಿಸಿ 2 ಬೈಕ್, ಒಂದು ಚೂರಿ ಮತ್ತು ಸುಲಿಗೆ ಮಾಡಿದ್ದ ಮೊಬೈಲ್ ಜಪ್ತಿ ಮಾಡಿದ್ದಾರೆ.

ಆಳಂದ ತಾಲ್ಲೂಕಿನ ಕೊಡಲಹಂಗರಗಾ ಗ್ರಾಮದ ಸುನೀಲಕುಮಾರ ಗಿಲಕಿ ಎಂಬುವವರು ಕಮಲಾಪುರ ಪಟ್ಟಣ ಸಮೀಪದ ಎಜಿಪಿ ಗ್ಯಾಸ್ ಪಂಪ್ ಹತ್ತಿರ ವಿದ್ದಾಗ ಬೈಕ್ ಮೇಲೆ ಬಂದ ನಾಲ್ವರು ಅಪರಿಚಿತ ಯುವಕರು ಇವರ ಕುತ್ತಿಗೆಗೆ ಚಾಕು ಹಚ್ಚಿ ಅವರ ಬಳಿ ಇದ್ದ ಓಪೊ ಎಫ್–17 ಮೊಬೈಲ್ ಕಸಿದುಕೊಂಡು ಹೋಗಿದ್ದರು. ಈ ಸಂಬಂಧ ಸುನೀಲಕುಮಾರ ಅವರು ಕಮಲಾಪುರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು.

ಈ ದೂರಿನ ಅನ್ವಯ ಎಸ್‌ಪಿ ಅಡ್ಡೂರು ಶ್ರೀನಿವಾಸಲು, ಗ್ರಾಮಾಂತರ ಉಪ ವಿಭಾಗದ ಎಸಿಪಿ ಅವರ ಮಾರ್ಗದರ್ಶನದಲ್ಲಿ ಗ್ರಾಮೀಣ ಶಿವಶಂಕರ ಸಾಹು, ಪಿಎಸ್‌ಐಗಳಾದ ಸಂಗೀತಾ, ಶಿವಶಂಕರ ಸುಬೇದಾರ, ಸಿಬ್ಬಂದಿಗಳಾದ ಕುಪೇಂದ್ರ, ರಾಜಶೇಖರ್, ಹುಸೇನ್ ಅವರು ತನಿಖೆ ನಡೆಸಿ ಮೂವರು ಆರೋಪಿಗಳನ್ನು ಬಂಧಿಸಿ ಎರಡು ಬೈಕ್, ಚೂರಿ ಮತ್ತು ಸುಲಿಗೆ ಮಾಡಿದ್ದ ಮೊಬೈಲ್ ಜಪ್ತಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಸುಲಿಗೆ ಕೋರರನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯಕ್ಕೆ ಎಸ್‌ಪಿ ಅಡ್ಡೂರು ಶ್ರೀನಿವಾಸಲು ಮತ್ತು ಗ್ರಾಮಾಂತರ ಉಪ ವಿಭಾಗದ ಎಸಿಪಿ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಅಥ್ಲೇಟಿಕ್ಸ್ ಕ್ರೀಡಾಕೂಟ: ಚಕ್ರ ಎಸೆತದಲ್ಲಿ ಅವಿನಾಶ ಪ್ರಥಮ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಪಟ್ಟಣದ ಅವಿನಾಶ ತಳಕೇರಿ ದಕ್ಷಿಣ ವಲಯ 18 ವರ್ಷದೊಳಗಿನ ಅಥ್ಲೇಟಿಕ್ಸ್ ಕ್ರೀಡಾಕೂಟದಲ್ಲಿ ಚಕ್ರ ಎಸೆತ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ವಿದ್ಯಾರ್ಥಿ ಅವಿನಾಶ ಆಂಧ್ರಪ್ರದೇಶದ ಗುಂಟೂರು ನಾಗಾರ್ಜುನ ಕ್ರೀಡಾಂಗಣದಲ್ಲಿ ಜರುಗಿದ ಏಳು ರಾಜ್ಯಗಳ ಕ್ರೀಡಾಪಟುಗಳು ಪಾಲ್ಗೊಂಡ ದಕ್ಷಿಣ ವಲಯ ಅಥ್ಲೇಟಿಕ್ಸ್ ಕ್ರೀಡಾಕೂಟದಲ್ಲಿ ಚಕ್ರ ಎಸೆತ ವಿಭಾಗದಲ್ಲಿ ಭಾಗವಹಿಸಿ 50.41 ಮೀಟರ್ ದೂರ ಎಸೆದು ಪ್ರಥಮ ಸ್ಥಾನ ಪಡೆದಿದ್ದಾನೆ.

ಸಾಧಕ ವಿದ್ಯಾರ್ಥಿ ಅವಿನಾಶ ಇವನು ಪಡಗಾ

ಗ್ರಾಮೀಣ ಕ್ರೀಡೆಗಳಿಗೆ ಹೆಚ್ಚು ಮಹತ್ವ ನೀಡಿ: ಸೋಮನಗೌಡ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಯುವಜನಾಂಗ ದೇಶಿಯವಾದ ಗ್ರಾಮೀಣ ಕ್ರೀಡೆಗಳಿಗೆ ಹೆಚ್ಚು ಮಹತ್ವ ನೀಡಬೇಕು ಎಂದು ಮಾಜಿ ಶಾಸಕ ಸೋಮನಗೌಡ ಪಾಟೀಲ(ಸಾಸನೂರ) ಹೇಳಿದರು.

ಪಟ್ಟಣದಲ್ಲಿ ಗೆಳೆಯರ ಬಳಗದಿಂದ ಇತ್ತೀಚಿಗೆ ಜರುಗಿದ ಕುಸ್ತಿ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದರು.

ಭಾರತೀಯ ಯುವಜನತೆ ಈಗೀಗ ಕ್ರಿಕೆಟ್, ಟೆನಿಸ್, ಫುಟ್‌ಬಾಲ್‌ನಂತ ಕ್ರೀಡೆಗಳತ್ತ ಹೆಚ್ಚಾಗಿ ಗಮನ ಹರಿಸುತ್ತಿದ್ದಾರೆ. ಆದರೆ ಇವುಗಳು ಮನರಂಜನೆ ಮಾತ್ರ ನೀಡಬಹುದು ವಿನಹಃ ದೈಹಿಕ ಬೆಳವಣಿಗೆಗಳನ್ನಲ್ಲ. ಆದ್ದರಿಂದ ಮಾನಸಿಕ, ದೈಹಿಕ ಬೆಳವಣಿಗೆಗೆ ಪೂರಕವಾದ ಗ್ರಾಮೀಣ ಕ್ರೀಡೆಗಳೆನಿಸಿದ ಕುಸ್ತಿ, ಕಬಡ್ಡಿಯಂತ ಆಟಗಳ ಕುರಿತು ಗಮನ ನೀಡಬೇಕು ಎಂದರು.

ಮಾಜಿಶಾಸಕ ಶರಣಪ್ಪ ಸುಣಗಾರ ಮಾತನಾಡಿ, ಇಂದು ಗೆಳೆಯರ ಬಳಗದಿಂದ ಕೈಗೊಂಡಿರುವ ಕುಸ್ತಿ ಪಂದ್ಯಾವಳಿ ಅತ್ಯಂತ ಸಮಯೋಚಿತ. ಇಂತಹ ದೇಶಿಯ ಕ್ರೀಡಾಕೂಟಗಳು ಇಂದು ಅಗತ್ಯವಾಗಿವೆ ಎಂದರು.

ಪಂದ್ಯಾವಳಿಯಲ್ಲಿ ಮಕ್ಕಳು ಸಹಿತ ಹಿರಿಯರು ಭಾಗವಹಿಸಿದ್ದು ವಿಶೇಷವಾಗಿತ್ತು. ಫೈನಲ್ ಪಂದ್ಯಾವಳಿಯ ಸಮಯದಲ್ಲಿ ತುಂತುರು ಮಳೆಯಿಂದ ಅಡಚಣೆಯಾದ ಕಾರಣ ಜೊತೆಗೆ ಫಲಿತಾಂಶ ಸಮನಾದ ಕಾರಣ ಇಬ್ಬರೂ ಸ್ಪರ್ಧಿಗಳಿಗೆ ಬಹುಮಾನದ ಮೊತ್ತವನ್ನು ಹಂಚಲಾಯಿತು.

ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ರಮೇಶ ಮಸಬಿನಾಳ, ರಾಜಕುಮಾರ ಸಿಂದಗೇರಿ, ಪ್ರಕಾಶ ಗುಡಿಮನಿ, ಸಂಪತ್ ಜಮಾದಾರ, ಪ್ರಕಾಶ ಮಲ್ಲಾರಿ, ರಮೇಶ ಈಳಗೇರ, ಕಾಸು ವಾಡೇದಮನಿ, ಸೋಮು ದೇವೂರ, ಶಾಂತೇಶ ದುರ್ಗಿ, ಸಲಾಹುದ್ಧಿನ್, ರಾಜು ಕಾಖಂಡಕಿ ಸೇರಿದಂತೆ ಪಟ್ಟಣ ಪಂಚಾಯಿತಿ ಹಾಗೂ ಗೆಳೆಯರ ಬಳಗದ ಸದಸ್ಯರು, ಸ್ಪರ್ಧಾಳುಗಳು ಇದ್ದರು.

ಡಿಸಿ ಟಿ.ಭೂಬಾಲನ್ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ರಸ್ತೆ ಸುರಕ್ಷತಾ ಸಮಿತಿ ಸಭೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಸೋಮವಾರ ಬೆಳಗ್ಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ರಸ್ತೆ ಸುರಕ್ಷತಾ ಸಮಿತಿ ಸಭೆ ನಡೆಯಿತು.

ಈ ವೇಳೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಂಕರ ಮಾರಿಹಾಳ, ವಿಜಯಪುರ ಉಪವಿಭಾಗಾಧಿಕಾರಿ ಗುರುನಾಥ ದಡ್ಡಿ, ಮಹಾನಗರ ಪಾಲಿಕೆ ಆಯುಕ್ತ ವಿಜಯಕುಮಾರ ಮೆಕ್ಕಳಕಿ, ಲೋಕೋಪಯೋಗಿ ಕಾರ್ಯನಿರ್ವಾಹಕ ಅಭಿಯಂತರರು ಸಿ.ಬಿ.ಚಿಕ್ಕಲಗಿ, ಪ್ರಾದೇಶಿಕ ಸಾರಿಗೆ ಅಧಿಕಾರಿ ವಸೀಮಬಾಬಾ ಮುದ್ದೇಬಿಹಾಳ, ಕಕರಸಾ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿ ನಾರಾಯಣಪ್ಪ ಕುರುಬರ, ಸಹಾಯಕ ಸಂಚಾರ ವ್ಯವಸ್ಥಾಪಕರು ಜೆ.ಕೆ. ಹುಗ್ಗೆನ್ನವರ್, ಕಾರ್ಮಿಕ ಇಲಾಖೆಯ ಸಜ್ಜನ, ಪೀಟರ್ ಅಲೆಕ್ಸಾಂಡರ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕಿತ್ತೂರು ರಾಣಿ ಚನ್ನಮ್ಮ ಜಯಂತ್ಯುತ್ಸವ & 200ನೇ ವಿಜಯೋತ್ಸವ ಆಚರಣೆ ಅದ್ದೂರಿಯಾಗಿ ಆಚರಿಸಲು ನಿರ್ಧಾರ

ಶರಣರು, ಮಹನೀಯರನ್ನು ಒಂದೊಂದು ಸಮುದಾಯಕ್ಕೆ ಸೀಮಿತಗೊಳಿಸದಿರಿ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಕಿತ್ತೂರು ರಾಣಿ ಚನ್ನಮ್ಮ ಜಯಂತ್ಯುತ್ಸವ ಹಾಗೂ 200ನೇ ವಿಜಯೋತ್ಸವ ಆಚರಣೆಯನ್ನು ಭವ್ಯವಾದ ಮೆರವಣಿಗೆಯ ಮೂಲಕ ಅದ್ದೂರಿಯಾಗಿ ಆಚರಿಸೋಣ ಎಂದು ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ರಮೇಶ ಮಸಬಿನಾಳ ಹೇಳಿದರು.

ಪಟ್ಟಣದ ಇಂಡಿ ರಸ್ತೆಯ ದಾನಗೊಂಡ ಬಡಾವಣೆಯಲ್ಲಿ ಭಾನುವಾರ ಕಿತ್ತೂರು ರಾಣಿ ಚನ್ನಮ್ಮ ಜಯಂತ್ಯುತ್ಸವ ಹಾಗೂ 200ನೇ ವಿಜಯೋತ್ಸವ ಆಚರಣೆ ಅಂಗವಾಗಿ ಜರುಗಿದ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಜಯಂತ್ಯುತ್ಸವ ಹಾಗೂ ವಿಜಯೋತ್ಸವ ಕಾರ್ಯಕ್ರಮದಲ್ಲಿ ಪಂಚಮಸಾಲಿ ಸಮುದಾಯದ ಯುವಕರನ್ನು ಒಳಗೊಂಡು ಎಲ್ಲ ಪ್ರಮುಖರು ಭಾಗವಹಿಸಿ ಶೋಭೆ ತರುವಂತೆ ಮನವಿ ಮಾಡಿದರು.

ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಸಿ.ಕೆ.ಕುದರಿ ಮಾತನಾಡಿ, ಇಂದು ಎಲ್ಲ ಶರಣರು, ಮಹನೀಯರನ್ನು ಒಂದೊಂದು ಸಮುದಾಯಕ್ಕೆ ಸೀಮಿತಗೊಳಿಸುತ್ತಿರುವುದು ಖೇದಕರ. ಇಂಥ ರೂಢಿ ಬದಲಾಗಬೇಕು. ರಾಣಿ ಚನ್ನಮ್ಮ ದೇಶದ ಹೆಮ್ಮೆಯ ವೀರಮಾತೆ, ವೀರಮಾತೆಯ ಜಯಂತಿ ಹಾಗೂ ವಿಜಯೋತ್ಸವದಲ್ಲಿ ಎಲ್ಲರೂ ಭಾಗವಹಿಸುವಂತಾಗಬೇಕು ಎಂದರು.

ತಾಲ್ಲೂಕು ಪಂಚಮಸಾಲಿ ಸಮಾಜದ ಅಧ್ಯಕ್ಷ ಗುರುರಾಜ್ ಆಕಳವಾಡಿ, ಕಸಾಪ ತಾಲ್ಲೂಕು ಅಧ್ಯಕ್ಷ ಜಿ.ಪಿ.ಬಿರಾದಾರ, ವೀರೇಶ ಕುದರಿ, ನಾಗೇಶ ನಾಗೂರ, ಕಲ್ಲನಗೌಡ ಬಿರಾದಾರ, ಮಡುಗೌಡ ಬಿರಾದಾರ(ಜಿರ್ಲಿ) ಮಾತನಾಡಿದರು.

ಬಾಬುಗೌಡ ಪಾಟೀಲ(ಜಿಡ್ಡಿಮನಿ), ಶ್ರೀಶೈಲ ದಾನಗೊಂಡ, ಸಂಗಪ್ಪಣ್ಣ ತಡವಲ್, ಪಂಚಾಕ್ಷರಿ ಮಿಂಚನಾಳ, ಕೆ.ಕೆ.ಭಾವಿಮನಿ, ಗೊಲ್ಲಾಳ ಬಿರಾದಾರ(ಹಿಟ್ನಳ್ಳಿ), ಭೀಮು ನಾಗರಳ್ಳಿ, ಅಪ್ಪುಗೌಡ ಪಾಟೀಲ(ಜಿಡ್ಡಿಮನಿ), ಶ್ರೀಶೈಲ ಯಂಭತ್ನಾಳ, ರವಿ ಕೋಟಿನ್, ಬಸವರಾಜ ಇಂಡಿ, ರಾಮು ದೇಸಾಯಿ, ರಮೇಶ ಮಾಳನೂರ, ಚೇತನ ಇಂಡಿ, ಮಲ್ಲು ಒಂಟೆತ್ತಿನ, ಭೀಮು ಜಲಕತ್ತಿ, ರವಿ ಒಂಟೆತ್ತಿನ ಹಾಗೂ ಸಮುದಾಯದ ಪ್ರಮುಖರು ಇದ್ದರು.

ಪಿಯು ಪರೀಕ್ಷಾ ಕೇಂದ್ರ ತೆರೆಯುವಂತೆ ಕರವೇ ಮನವಿ

■ ಉದಯರಶ್ಮಿ ದಿನಪತ್ರಿಕೆ

ಯಡ್ರಾಮಿ: ಕರ್ನಾಟಕ ರಕ್ಷಣಾ ವೇದಿಕೆಯ (ಟಿ.ಎ.ನಾರಾಯಣ ಗೌಡರ ಬಣ) ಯಡ್ರಾಮಿ ತಾಲೂಕು ಅಧ್ಯಕ್ಷ ದೇವಿಂದ್ರಪ್ಪ ಗೌಡ ನಿಂಗನಗೌಡ ಪೊಲೀಸ್ ಪಾಟೀಲ್ ಇವರ ನೇತೃತ್ವದಲ್ಲಿ ಸೋಮವಾರ ಯಡ್ರಾಮಿ ತಾಲೂಕಿಗೆ 12ನೇ ತರಗತಿಯ ವಾರ್ಷಿಕ ಪರೀಕ್ಷೆ ಕೇಂದ್ರವನ್ನು ಮುಂದೆ ಬರುವ ಮಾರ್ಚ್ ತಿಂಗಳ ಒಳಗಾಗಿ ಪರೀಕ್ಷಾ ಕೇಂದ್ರವನ್ನು ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಕೊಡಬೇಕೆಂದು ತಾಲೂಕು ದಂಡಾಧಿಕಾರಿಗಳ ಮುಖಾಂತರ ಜಿಲ್ಲಾ ಅಧಿಕಾರಿಗಳಿಗೂ ಮತ್ತು ಶಿಕ್ಷಣ ಇಲಾಖೆ ಉಪ ನಿರ್ದೇಶಕರಿಗೂ ಮನವಿ ಪತ್ರ ಸಲ್ಲಿಸಲಾಯಿತು. ಇದಕ್ಕೂ ಮುನ್ನ, ಸರ್ದಾರ್ ಶರಣಗೌಡ ಸರ್ಕಲ್ ದಿಂದ ನೂರಾರು ಕಾರ್ಯಕರ್ತರು ಸಾಮೂಹಿಕ ಬೈಕ್ ಸವಾರಿಯೊಂದಿಗೆ ಬಂದು ದಂಡಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಈ ವೇಳೆ ದೇವಿಂದ್ರಪ್ಪಗೌಡ ಮಾತನಾಡಿ, ಯಡ್ರಾಮಿ ತಾಲೂಕು ಕೇಂದ್ರವಾಗಿದೆ. ಸರ್ಕಾರಿ, ಖಾಸಗಿ ಸೇರಿದಂತೆ ಮೂರು ಪಿಯು ಕಾಲೇಜುಗಳಿವೆ. ಈಗಿರುವ ಪರೀಕ್ಷಾ ಕೇಂದ್ರ ಜೇವರ್ಗಿಗೆ ವಿದ್ಯಾರ್ಥಿಗಳು ಹೋಗಿ ಬರಲು ಅನಾನುಕೂಲ ಆಗುತ್ತಿದೆ . ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಸಮಸ್ಯೆ ಕುರಿತು ಗಮನ ಹರಿಸಿ ಪಿಯು ಪರೀಕ್ಷಾ ಕೇಂದ್ರ 2024–25 ನೇ ಸಾಲಿಗೆ ಪ್ರಾರಂಭಿಸಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸಭಾ ಸಂಘಟಕ ಶಬ್ಬೀರ್ ಸಾಬ್ ಸಂಬಡ್ ಮತ್ತು ಸಾಮಾಜಿಕರಾದ ಉಸ್ಮಾನ್ ಬಡಿಗೇರ್, ತಾಲೂಕ ಪ್ರಧಾನ ಕಾರ್ಯದರ್ಶಿ ಗಿರಿಮಲ್ಲನಗೌಡ ಪಾಟೀಲ್, ತಾಲೂಕು ಉಪಾಧ್ಯಕ್ಷ ನಿಂಗಣ್ಣ ಮಳ್ಳಿ ಮತ್ತು ಭೀಮನಗೌಡ ದ್ಯಾಮ, ನಗರ ಘಟಕ ಅಧ್ಯಕ್ಷ ಚಂದ್ರಗೌಡ ಖಾನ್ ಗೌಡ, ರೇವಣಸಿದ್ಧ ಸುಂಬಡ, ಶಂಕರಗೌಡ ಕನ್ನೊಳ್ಳಿ ,ಇಬ್ರಾಮ್ ಸಾಬ್ ಬೀಳವಾರ್, ಮಲ್ಲಣ್ಣ ಸೈಬಣ್ಣ ತಳವಾರ್, ಚಂದ್ರಶೇಖರ್ ಅರಳಗುಂಡಗಿ, ನಿಂಗಣ್ಣ, ಮಡಿವಾಳಪ್ಪ ಗೌಡ ಪಾಟೀಲ್

ಯಲ್ಲಾಲಿಂಗ ಕಡಕೋಳ, ಮಾಂತಗೌಡ ಪಾಟೀಲ್, ಪ್ರಭು ಹಾದಿಮನಿ, ದಯಾನಂದ್ ಕಣಮೇಶ್ವರ, ಭೀಮಾಶಂಕರ್ ಕಣಮೇಶ್ವರ, ಮಹೇಶ್ ನಂದಳ್ಳಿ, ರಾಜು ಮಂಗಳೂರು, ಮಲ್ಲಿಕಾರ್ಜುನ್ ಅಣಜಗಿ, ವೀರೇಶ್ ಕವಲ್ದಾರ್, ಮಡಿವಾಳಪ್ಪ ಗೌಡ ಬಿರಾದಾರ್, ದೇವೇಂದ್ರ ಕಡಕೋಳ, ಭೀಮಾಶಂಕರ್ ಜಮಾದಾರ್, ಸೋಮರಾಯ ಪೂಜಾರಿ, ತಿಪ್ಪಣ್ಣ ಜಾಲಹಳ್ಳಿ, ಮಡಿವಾಳಪ್ಪ ಗೌಡ ಶಾಕಾಪುರ್, ಶಾಂತಪ್ಪ ಕುದುರಿಕಾರ್, ವಸೀಮ್ ನಾಯ್ಕೋಡಿ, ಶರಣು ಜಂಬೆರಾಳ, ಸಿದ್ದಾರ್ಥ ನಿಂಗಣ್ಣ ನಾವಿ, ಸಂಗಣ್ಣ ಗೌಡ ಅಣಜಿಗಿ, ಇಸ್ಮಾಯಿಲ್ ಹಂಗರಗಾ, ರಾಜು ಡಿ ನಾಯಕ್, ಹಂಗರಗಾಕೆ ಗ್ರಾಮದ ಅಧ್ಯಕ್ಷರು ಉಪಾಧ್ಯಕ್ಷರು ಕಾರ್ಯಕರ್ತರು, ಇತರರು ಪಾಲ್ಗೊಂಡಿದ್ದರು.

ಇಂದು ಕೋಮುವಾದಿ ಶಕ್ತಿಗಳ ವಿರುದ್ಧ ಡಿಎಸ್ಸೆಸ್ ಜನಾಂದೋಲನ

■ ಉದಯರಶ್ಮಿ ದಿನಪತ್ರಿಕೆ

ಮುದ್ದೇಬಿಹಾಳ: ರಾಜ್ಯ ದಲಿತ ಸಂಘರ್ಷ ಸಮಿತಿಯ ವತಿಯಿಂದ ಅ.22 ರಂದು ರಾಜ್ಯದಾದ್ಯಂತ ಜಿಲ್ಲಾಧಿಕಾರಿಗಳ ಕಚೇರಿಯ ಎದುರು ಪ್ರಜಾಪ್ರಭುತ್ವವನ್ನು ಅಸ್ಥಿರಗೊಳಿಸುತ್ತಿರುವ ಕೋಮುವಾದಿ ಶಕ್ತಿಗಳ ವಿರುದ್ಧ ಜನಾಂದೋಲನ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ್ದು ಈ ಪ್ರತಿಭಟನೆಯಲ್ಲಿ ಜಿಲ್ಲೆಯ ಎಲ್ಲ ದಲಿತ ಬಾಂಧವರು ಭಾಗಿಯಾಗಬೇಕು ಎಂದು ವಿವಿದ ದಲಿತಪರ ಸಂಘಟನೆಗಳ ಮುಖಂಡರು ವಿನಂತಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಈ ಕುರಿತು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಮುಖಂಡರು ದೇಶಕ್ಕೆ ಸ್ವತಂತ್ರ ಬಂದು ಸಾಕಷ್ಟು ವರ್ಷಗಳು ಗತಿಸಿದರೂ ಕೋಮುವಾದಿ, ಮನುವಾದಿ ಶಕ್ತಿಗಳ ಕುತಂತ್ರ ಪರಂಪರೆ ಇನ್ನಷ್ಟು ಬಲಗೊಳ್ಳುತ್ತಲೇ ಮುಂದುವರೆಯುತ್ತಿದೆ. ಆಡಳಿತಾರೂಢ ಸರ್ಕಾರಗಳು ಪ್ರಜಾಪ್ರಭುತ್ವದ ಆಸಯಗಳನ್ನು ಈಡೇರಿಸುವಲ್ಲಿ ವಿಫಲವಾಗಿವೆ. ಮೂಲಭೂತ ಹಕ್ಕುಗಳೂ ಮರೀಚಿಕೆಯಾಗಿಯೇ ಉಳಿದಿವೆ. ಜನಸಾಮಾನ್ಯರ ಬದುಕು ಅತಂತ್ರ ಸ್ಥಿತಿಯಲ್ಲಿದ್ದು ಸರ್ವಾಧಿಕಾರಿ ಪರಜಾಪ್ರಭುತ್ವದ ಅಡಿಯಲ್ಲಿ ಬದುಕುತ್ತಿದ್ದೇವೆ. ಹಾಗಾಗಿ ರಾಜ್ಯ ದಲಿತ ಸಂಘರ್ಷ ಸಮಿತಿ ಎಲ್ಲ ಕೇಂದ್ರಗಳಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಒಂದು ದಿನದ ಸಾಂಕೇತಿಕ ಜನಾಂದೋಲನ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ್ದು ಜಿಲ್ಲೆಯ ಎಲ್ಲ ದಲಿತ ಬಾಂಧವರು ಭಾಗಿಯಾಗಿ ಯಶಸ್ವಿಗೊಳಿಸಬೇಕು ಎಂದರು. ಈ ವೇಳೆ ಸಂಘಟನೆಯ ಜಿಲ್ಲಾ ಸಂಯೋಜನ ಮಂಜುನಾಥ ಕಟ್ಟಿಮನಿ ಪ್ರಮುಖರಾದ ಅಕ್ಷಯ ಅಜಮನಿ, ಸಂಗು ಚಲವಾದಿ, ರಾಜು ಮಸಿಬಿನಾಳ, ಸಂಗಮೇಶ ವಿಜಯಕರ, ದುರ್ಗಪ್ಪ ಲೊಟಗೇರಿ, ಮಹೆಬೂಬ ಸಣ್ಣಕ್ಕಿ, ಮಹೆಬೂಬ ಕುಳಗೇರಿ, ಆಸೀಫ ನಿಡಗುಂದಿ ಸೇರಿದಂತೆ ಇನ್ನಿತರರು ಇದ್ದರು.

ಹುಲಜಂತಿ ಮಾಳಿಂಗರಾಯ ಜಾತ್ರೆ ನಿಮಿತ್ಯ ವಿಶೇಷ ಬಸ್‌ಗಳ ಕಾರ್ಯಾಚರಣೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮಹಾರಾಷ್ಟ್ರದ ಜತ್ತ ತಾಲೂಕಿನ ಹುಲುಜಂತಿ ಗ್ರಾಮದಲ್ಲಿ ದಿನಾಂಕ 28–10–2024ರಿಂದ 03–11–20247ರವರೆಗೆ ಶ್ರೀ ಮಾಳಿಂಗರಾಯ ದೇವರ ಜಾತ್ರೆ ಜರಗುವ ನಿಮಿತ್ಯ ಕಕರಸಾ ವಿಜಯಪುರ ನಿಗಮದಿಂದ ಹೆಚ್ಚುವರಿ ಬಸ್‌ಗಳ ಕಾರ್ಯಚರಣೆ ಮಾಡಲಾಗುವುದು ಎಂದು ಕಕರಸಾ ನಿಗಮ ವಿಜಯಪುರದ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ವಿಜಯಪುರ 1ಘಟಕದ ವ್ಯವಸ್ಥಾಪಕರು(ಮೊ.7760992263), ಇಂಡಿ ಘಟಕದ ವ್ಯವಸ್ಥಾಪಕರು(ಮೊ.7760992265), ಮುದ್ದೇಬಿಹಾಳ ಘಟಕದ ವ್ಯವಸ್ಥಾಪಕರು(ಮೊ.7760992267), ಬಸವನ ಬಾಗೇವಾಡಿ ಘಟಕದ ವ್ಯವಸ್ಥಾಪಕರು(ಮೊ.7760992269), ವಿಜಯಪುರ 2 ಘಟಕದ ವ್ಯವಸ್ಥಾಪಕರು(ಮೊ.7760992264), ಸಿಂದಗಿ ಘಟಕದ ವ್ಯವಸ್ಥಾಪಕರು(ಮೊ.7760992266), ತಾಳಿಕೋಟೆ ಘಟಕದ ವ್ಯವಸ್ಥಾಪಕರು(ಮೊ.7760992268), ಕೇಂದ್ರ ಬಸ್ ನಿಲ್ದಾಣದ ದೂ.08352–251344, ಮೊ.7760992258ಕ್ಕೆ ಸಂಪರ್ಕಿಸಬಹುದು ಎಂದು ಅವರು ತಿಳಿಸಿದ್ದಾರೆ.

ಮದ್ಯ ಸೇವನೆಗೆ ಅವಕಾಶ: ಪ್ರಕರಣ ದಾಖಲು

■ ಉದಯರಶ್ಮಿ ದಿನಪತ್ರಿಕೆ

ಮುದ್ದೇಬಿಹಾಳ: ಪಟ್ಟಣದ ಬೋಸಲೆ ಪೆಟ್ರೋಲ್ ಪಂಪ್ ಬಳಿ ಇರುವ ಪಾನ್‌ಶಾಪ್ ಅದುರು ಮಧ್ಯಸೇವನೆಗೆ ಅವಕಾಶ ಮಾಡಿಕೊಟ್ಟ ಆರೋಪದ ಅಡಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.ಶಿವಾನಂದ ಲಾಡ ಮೇಲೆ ಪ್ರಕರಣ ದಾಖಲಾಗಿದ್ದು ಈತ ಯಾವುದೇ ಲೈಸನ್ಸ್ ವ, ಪರವಾನಗೆ ಹೊಂದದೆ ತನ್ನ ಪಾನ್‌ಶಾಪ್ ಎದುರು ಗ್ಲಾಸು, ನೀರು ಹಾಗೂ ತಿನಿಸು ಕೊಟ್ಟು ಮಧ್ಯ ಸೇವನೆಗೆ ಅವಕಾಶ ಮಾಡಿಕೊಟ್ಟಾಗ ಸಿಕ್ಕಿದ್ದು ಈ ಬಗ್ಗೆ ಪಿಎಸ್‌ಐ ಸಂಜೀವ ತಿಪರೆಡ್ಡಿ ನೀಡಿದ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಾಗಿದೆ.

ಗ್ರಂಥಗಳು ಜನಸಾಮಾನ್ಯರನ್ನು ತಲುಪಬೇಕು :ಕಾವ್ಯಶ್ರೀ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಬಾಲಿಕೆಯರ ಸರಕಾರಿ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ಹಾಗೂ ಸಾಹಿತಿ ಡಾ. ಸಿದ್ದು ಸಾವಳಸಂಗ ಅವರು ತಮ್ಮ ಮನೆಯಲ್ಲಿ ಸೋಮವಾರ ಏರ್ಪಡಿಸಿದ್ದ ಸರಳ ಸಮಾರಂಭದಲ್ಲಿ ತಮ್ಮ ಮೂರನೇ ಕವನ ಸಂಕಲನ "ಗೋಧೂಳಿ ಗಂಧ" ಕೃತಿ ಬಿಡುಗಡೆ ಮಾಡಿದರು.

ಪುಸ್ತಕ ಬಿಡುಗಡೆ ಮಾಡಿದ ಕಾವ್ಯಶ್ರೀ ಎಸ್.ಸಾವಳಸಂಗ ಮಾತನಾಡಿ, "ಗ್ರಂಥಗಳು ಅಮೂಲ್ಯ ಸಂಪತ್ತು ಇದ್ದಂತೆ. ಸಹೃದಯ ಓದುಗರು ಅವುಗಳನ್ನು ಕೊಂಡು ಓದಿ, ಲೇಖಕರಿಗೆ ಪ್ರೋತ್ಸಾಹಿಸಿ ತನ್ಮೂಲಕ ಕನ್ನಡ ಸಾಹಿತ್ಯವನ್ನು ಬೆಳೆಸಬೇಕು. ಕವಿ ಬರೆದ ಕೃತಿಗಳು ಜನಸಾಮಾನ್ಯರನ್ನು ತಲುಪಿದಾಗ ಮಾತ್ರ ಕವಿಯ ಬರವಣಿಗೆಯ ಶ್ರಮ ಸಾರ್ಥಕವಾಗುತ್ತದೆ" ಎಂದು ಹೇಳಿದರು.

ಕೃತಿಯ ಲೇಖಕ ಡಾ.ಸಿದ್ದು ಸಾವಳಸಂಗ ಸನ್ಮಾನ ಸ್ವೀಕರಿಸಿ ಮಾತನಾಡಿ, "ಗೋಧೂಳಿ ಗಂಧ ಇದು ನನ್ನ ಮೂರನೆಯ ಕವನ ಸಂಕಲನ.

ಇದು ಅನೇಕ ಸಾಮಾಜಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತದೆ. ಗ್ರಂಥಗಳು ಕಪಾಟನ್ನು ಅಲಂಕರಿಸದೆ ಜನರ ಮನವನ್ನು ಮುಟ್ಟಬೇಕು ಹಾಗೂ ತಟ್ಟಬೇಕು. ಕವಿ ತನ್ನ ಮನಸ್ಸಿಗೆ ಹೊಳೆದದ್ದನ್ನು ಬರೆಯುತ್ತಾರೆ. ಆದರೆ ಅದರ ನಿಜವಾದ ವಿಮರ್ಶಕರೆಂದರೆ ಸಹೃದಯ ಓದುಗರು.

ಅವರು ಓದಿ ಮೆಚ್ಚುಗೆ ಸೂಚಿಸಿದರೆ ಮಾತ್ರ ಅದು ಉತ್ತಮ ಕೃತಿ ಎನಿಸಿಕೊಳ್ಳಲು ಸಾಧ್ಯವಿದೆ" ಎಂದು ಹೇಳಿದರು.

ಶ್ರೀಮತಿ ಭಾರತಿ ಸಾವಳಸಂಗ, ಡಾ. ಸಿದ್ದು ಸಾವಳಸಂಗ, ಕಾವ್ಯಶ್ರೀ ಎಸ್. ಸಾವಳಸಂಗ, ಭೀಮರಾಯ ಸಾವಳಸಂಗ ಮತ್ತಿತರರಿದ್ದರು.

ಕಿಡ್ನಿ ಸಂಬಂಧಿ ರೋಗಿಗಳಿಗೆ ಉಚಿತ ಚಿಕಿತ್ಸಾ ಶಿಬಿರ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಬಿ. ಎಲ್. ಡಿ. ಇ ಸಂಸ್ಥೆ ಎ.ವಿ.ಎಸ್. ಆಯುರ್ವೇದ ಮಹಾವಿದ್ಯಾಲಯದಲ್ಲಿ ಇಂದಿನಿಂದ 60 ದಿನಗಳವರೆಗೆ ಕಾಲ ಕಿಡ್ನಿ ಸಂಬಂಧಿಸಿದ ರೋಗಿಗಳಿಗೆ ಉಚಿತ ಚಿಕಿತ್ಸಾ ಶಿಬಿರ ಏರ್ಪಡಿಸಲಾಗಿದೆ ಎಂದು ಪ್ರಾಚಾರ್ಯ ಡಾ.ಸಂಜಯ ಕಡ್ಲಿಮಟ್ಟಿ ತಿಳಿಸಿದ್ದಾರೆ.

ದಿ.21ಅಕ್ಟೋಬರ್ ನಿಂದ ದಿ.21 ಡಿಸೆಂಬರ್ ವರೆಗೆ ಬೆ.9 ರಿಂದ ಸಂ.4 ಗಂಟೆಯವರೆಗೆ ಹೆಚ್ಚಿನ ಕ್ರೀಯಾಟೆನಿನ್ ಹೊಂದಿರುವ ರೋಗಿಗಳಿಗೆ ವಿಶೇಷ ಸಲಹೆ ಮತ್ತು ಚಿಕಿತ್ಸೆಯನ್ನು ಈ ಶಿಬಿರದಲ್ಲಿ ಉಚಿತವಾಗಿ ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಡಾ.ಅಶ್ವಿನಿ ಸಜ್ಜನವರ ಮೊ.ನಂ: 7406737888, 8073853981 ಸಂಪರ್ಕಿಸಬಹುದು ಎಂದು ಪ್ರಾಚಾರ್ಯ ಡ